ಕನ್ನಡಪ್ರಭ
ಗುರುವಾರ 7.05.2026

ಗರಿಷ್ಠ 35°c | ಕನಿಷ್ಠ 25°c

ಸುದ್ದಿ ಸಿಂಚನ

ಇಂದು ಸಚಿವ ದಿನೇಶ್ ಗುಂಡೂರಾವ್ ಪ್ರವಾಸ

ಮೈಸೂರು: ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಅವರು ಮೇ 7 ರಂದು ಬೆಳಗ್ಗೆ 11 ಗಂಟೆಗೆ ಅಖಿಲ ಭಾರತ ವಾಕ್‌ಮತ್ತು ಶ್ರವಣ ಸಂಸ್ಥೆಯ ನಾಲೇಡ್ಜ್ ಪಾರ್ಕ್ ನಲ್ಲಿ ಆಯೋಜಿಸಿರುವ 24ನೇ ವಾರ್ಷಿಕ ಸಮ್ಮೇಳನದಲ್ಲಿ ಪಾಲ್ಗೊಳ್ಳುವರು. ನಂತರ 3.30ಕ್ಕೆ ಬೆಂಗಳೂರಿಗೆ ತೆರಳುವರು.

ಯಾದವಗಿರಿ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

ಮೈಸೂರು: ವಿ.ವಿ. ಮೊಹಲ್ಲಾ ಉಪ ವಿಭಾಗ ವ್ಯಾಪ್ತಿಯ 11 ಕೆ.ವಿ ಯಾದವಗಿರಿ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಮೇ 7 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಈ ಅವಧಿಯಲ್ಲಿ ಯಾದವಗಿರಿ ಪರಮ ಹಂಸರಸ್ತೆ (1ನೇ ಮೇನ್ ನಿಂದ 5ನೇ ಮೇನ್) ವಿವೇಕಾನಂದ ಮುಖ್ಯರಸ್ತೆ, ಯಾದವ ಗಿರಿ 1ನೇ-2ನೇ ಮೇನ್, ದೋಬಿ ಘಾಟ್, ರೈಲ್ವೇ ಲೋಕ ಕಾಲೋನಿ, ಯಾದವಗಿರಿ ಚರ್ಚ್ ರಸ್ತೆ, ರೈಲ್ವೇ ಆಸ್ಪತ್ರೆ, ದಾಸಪ್ರಕಾಶ್ ಹೋಟೆಲ್ ಹಾಗೂ ಸುತ್ತಮುತ್ತ ಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ವಿವಿ ಮೊಹಲ್ಲಾ ವಿಭಾಗದ ಇಇ ತಿಳಿಸಿದ್ದಾರೆ.

ವಿವಿ ಮೊಹಲ್ಲಾ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ ಇಂದು

ಮೈಸೂರು: ವಿವಿ ಮೊಹಲ್ಲಾ ಉಪವಿಭಾಗ ವ್ಯಾಪ್ತಿಯ 66/11 ಕೆ.ವಿ ಹೆಬ್ಬಾಳ್ ವಿದ್ಯುತ್ ವಿತರಣಾಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ ಮಯೂರ ವಿದ್ಯುತ್ ಮಾರ್ಗದಲ್ಲಿ ಭೂಗತ ಕೇಬಲ್ ಕೆಲಸದ ನಿಮಿತ್ತ ಮೇ 7ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.ಕೆ.ಐ.ಎ.ಡಿ.ಬಿ ಲೇಔಟ್, ಮಿಲಿಟರಿ ಕ್ವಾರ್ಟರ್ಸ್‌ಸುತ್ತಮುತ್ತ, ನಿಸರ್ಗ ಲೇಔಟ್, ಚಿತ್ರಾ ರೆಸಿಡೆನ್ಸಿ ಹಿಂಭಾಗ, ಲಕ್ಷ್ಮೀಕಾಂತನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ವಿವಿ ಮೊಹಲ್ಲಾ ವಿಭಾಗದ ಇಇ ತಿಳಿಸಿದ್ದಾರೆ.

ಮಕ್ಕಳಿಗೆ ಶಿಬಿರ

ಮೈಸೂರು: ಋಷಿ ಸಂಸ್ಕೃತಿ ವಿದ್ಯಾಕೇಂದ್ರವು ಮಕ್ಕಳ ಆರೋಗ್ಯ, ಬೇಸಿಗೆ ಶಿಬಿರ ಮತ್ತು ಸ್ಮರಣ ಶಕ್ತಿ ಯೋಗ ಪರಿಚಯ ಕಾರ್ಯಕ್ರಮ ಏರ್ಪಡಿಸಿದೆ. ಆಸಕ್ತರು ಎಚ್.ಎಸ್. ರಮೇಶಚಂದ್ರ, ಮೊ. 94484 58050 ಸಂಪರ್ಕಿಸಬಹುದು.

ಬ್ರಾಹ್ಮಣ ವಧೂವರಾನ್ವೇಷಣೆ

ಮೈಸೂರು: ಸಪ್ತಪದಿ ಫೌಂಡೇಷನ್ ಟ್ರಸ್ಟ್ ಮೇ 9-10 ರಂದು ಬ್ರಾಹ್ಮಣ ವಧು- ವರಾನ್ವೇಷಣೆ ಹಾಗೂ ಶ್ರೀನಿವಾಸ ಕಲ್ಯಾಣೋತ್ಸವ ಏರ್ಪಡಿಸಿದ್ದು, ಆಸಕ್ತರು ಶ್ರೀನಿವಾಸ್, ಮೊ. 94494 25536 ಸಂಪರ್ಕಿಸಬಹುದು.



ಅಕ್ಕಮ್ಮ ನಿಧನ

ಮೈಸೂರು: ನಗರದ ಬಂಡಿಕೇರಿ ನಿವಾಸಿ ಅಕ್ಕಮ್ಮ (97) ವರ್ಷ ಬುಧವಾರ ನಿಧಾನರಾದರು. ಮೃತರು ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ.

ಕಬಿನಿ ಜಲಾಶಯ ನೀರಿನ ಮಟ್ಟ	
ಇಂದಿನ ಮಟ್ಟ	2256.58 (6.10)
ಒಳಹರಿವು	136 ಕ್ಯುಸೆಕ್
ಹೊರಹರಿವು	700 ಕ್ಯುಸೆಕ್
ಗರಿಷ್ಠ ಮಟ್ಟ	2284 ಅಡಿ

ಲಯನ್ಸ್ ಕ್ಲಬ್‌ನಿಂದ ₹60,000 ಮೌಲ್ಯದ ಕ್ರೀಡಾ ಸಾಮಗ್ರಿ ವಿತರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಲಯನ್ ಅಂತಾರಾಷ್ಟ್ರೀಯ ಜಿಲ್ಲೆ 317ಜಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ಇಲ್ಲಿಗೆ ವಾಕ್ ಮತ್ತು ಶ್ರವಣ ಚಿಕಿತ್ಸೆಗೆ ಬರುವ ಮಕ್ಕಳಿಗೆ ಜಿಲ್ಲೆ ವತಿಯಿಂದ 60 ಸಾವಿರ ರೂ.ಗಳ ಕ್ರೀಡಾ ಸಾಮಗ್ರಿ ನೀಡಲಾಯಿತು.

300ಕ್ಕೂ ಹೆಚ್ಚು ಮಕ್ಕಳು ಮತ್ತು ಪೋಷಕರಿಗೆ ಸಿಹಿ, ಚಾಕಲೇಟ್ ನೀಡಲಾಯಿತು.

ಲಯನ್ಸ್ ಜಿಲ್ಲೆ ರಾಜ್ಯಪಾಲ ಕೆ.ಎಲ್. ರಾಜಶೇಖರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಸಂಸ್ಥೆಯು ಇಂಥ ಸೇವಾ ಕಾರ್ಯಗಳಲ್ಲಿಮುಂಚೂಣಿಯಲ್ಲಿಇರುತ್ತದೆ.ಈಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಪ್ರೊ.ಎಂ. ಪುಷ್ಪಾವತಿ ಮಾತನಾಡಿ, ಇಂತಹ ಲಯನ್ ಸಂಸ್ಥೆಗಳು ಇಲ್ಲಿಗೆ ಬರುವ ಬಡ ಮಕ್ಕಳಿಗೆ ಸಹಾಯ ಮಾಡುತ್ತ ಬಂದಿವೆ.

ಕಾರ್ಯಕ್ರಮದ ಮುಖ್ಯ ಸಚೇತಕ ಹಾಗೂ ಮಾಜಿ ಜಿಲ್ಲಾ ರಾಜ್ಯಪಾಲ ಎಂ.ಎನ್. ಜಯಪ್ರಕಾಶ್ ಮಾತನಾಡಿ, ನಿಮ್ಮ ಸಮಸ್ಯೆಗೆ ಯಾವುದಾದರೂ ಸಹಾಯ ಬೇಕೆಂದರೆ ಲಿಖಿತ ಮೂಲಕ ನಮಗೆ ತಿಳಿಸಿ ನಾವು ಅದಕ್ಕೆ ಸ್ಪಂದಿಸುತ್ತೇವೆ ಎಂದರು.



ವಾಕ್ ಮತ್ತು ಶ್ರವಣ ಸಂಸ್ಥೆ ನಿರ್ದೇಶಕಿ ಪ್ರೊ.ಎಂ. ಪುಷ್ಪಾವತಿ, ಅಲಯನ್ಸ್ ಇಂಟರ್ನ್ಯಾಷನಲ್ ಜಿಲ್ಲೆ 317ಜಿಯ ಜಿಲ್ಲಾ ರಾಜ್ಯಪಾಲ ಕೆ.ಎಲ್. ರಾಜಶೇಖರ್‌ಅವರನ್ನು ಸನ್ಮಾನಿಸಲಾಯಿತು. ಡಿಸಿ ಫಾರ್‌ಅಂಗರ್‌ಹಾಗೂ ಲಯನ್ಸ್ ಕ್ಲಬ್ ಆಫ್ ಮೈಸೂರ್‌ಗ್ರೀನ್ ಸಿಟಿ ಅಧ್ಯಕ್ಷ ಜಯಕುಮಾರ್‌ಅವರನ್ನು ಸನ್ಮಾನಿಸಲಾಯಿತು.

ಜಿಲ್ಲಾ ರಾಜ್ಯಪಾಲ ಎಸ್. ಮತಿದೇವ್ ಕುಮಾರ್, ಉಪ ಜಿಲ್ಲಾರಾಜ್ಯಪಾಲ ಎಂ. ಸಿದ್ದೇಗೌಡ, ಆಯಿಷ್ ನ ಡಾ. ಜಯಶ್ರೀ ಶಂಭಾಲ್, ರಾಜಕುಮಾರ್, ಜಿಲ್ಲಾಕ್ಯಾಬಿನೇಟ್ ಕಾರ್ಯದರ್ಶಿ ಟಿ.ಎಚ್. ವೆಂಕಟೇಶ್, ಜಿಲ್ಲಾ ರಾಯಭಾರಿ ಕೆ.ಡಿ. ಕಾರ್ಯಪ್ಪ, ಲಯನ್ಸ್ ಕ್ಲಬ್‌ಆಫ್ ಮೈಸೂರು ಆದಿತ್ಯದ ಅಧ್ಯಕ್ಷ ಡಾ.ಕೆ.ಬಿ. ಲಿಂಗರಾಜು, ವಿ.ಸಿ. ಕೋಮಲಾ, ಮಕ್ಕಳು, ಪೋಷಕರು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

9ಕ್ಕೆ ಮೈಸೂರಿನಲ್ಲಿ ಸಿತಾರ್ ಸಂಭ್ರಮ

ಮೈಸೂರು: ಕುವೆಂಪುನಗರದ ಕಲಾ ಸಂವಹನ ಟ್ರಸ್ಟ್ ವತಿಯಿಂದ ಮೇ 9 ರಂದು ಸಂಜೆ 5ಕ್ಕೆ ನಗರದ ಕಲಾ ಮಂದಿರದಲ್ಲಿ ಮೈಸೂರು ಸಿತಾರ್‌ಸಂಭ್ರಮ ಕಾರ್ಯ ಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್ ಪದಾಧಿಕಾರಿ ಅರ್ಚನಾ ನಾಯಕ್ ತಿಳಿಸಿದರು.ಅಂತಾರಾಷ್ಟ್ರೀಯ ಖ್ಯಾತಿಯ ಉಸ್ತಾದ್ ಡಾ. ಮೊಹ ಸಿನ್ ಖಾನ್ ಅವರು ನಗರದಲ್ಲಿ ಸಿತಾರ್‌ಕಲಿಕೆ ತರಬೇತಿ ಆರಂಭಿಸಿ ಒಂದು ವರ್ಷ ತುಂಬಿದ ನೆನಪಿನಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಸಿಎಂ ಸಿದ್ದರಾಮಯ್ಯ ಉದ್ಘಾಟಿಸುವರು, ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹ ದೇವಪ್ಪ ಅಧ್ಯಕ್ಷತೆ ವಹಿಸು ವರು. ಸ್ವಾಮಿ ಕೃತಾ ತ್ಮಾನಂದ ಸಾನ್ನಿಧ್ಯ ವಹಿಸುವರು. ಗಾಯ ಕಿ ಎಚ್.ಆರ್. ಲೀಲಾವತಿ, ಎಂ. ಜಗನ್ನಾಥ ಶೆಣೈ ಮೊದಲಾ ದವರು ಪಾಲ್ಗೊಳ್ಳುವು ದಾಗಿ ಅವರು ಬುಧವಾರ ಸುದ್ದಿಗೋಷ್ಠಿ ಯಲ್ಲಿ ಹೇಳಿದರು. ನಂತರ ಪಂಡಿತ್ ವೆಂಕಟೇಶ್ ಕು ಮಾರ್‌ಗಾಯನ, ಸಿತಾರ್ ಸಮೂಹ ವಾದನ ವಾದ ಸಿತಾರ್‌ಸಿಂಚನ, ಉಸ್ತಾದ್ ಮೊಹಸಿ ನ್ ಖಾನ್ ಅವರಿಂದ ಸಿತಾರ್‌ವಾದನ, ಸಾಥ್ ಸಂಗೀತ್ ಕಾರ್ಯಕ್ರಮ ಜರುಗಲಿದೆ ಎಂದು ಅವರು ಮಾಹಿತಿ ನೀಡಿದರು. ಟ್ರಸ್ಟ್ ಕಾರ್ಯದರ್ಶಿ ಉಸ್ತಾ ದ್ ಡಾ. ಮೊಹಸಿನ್ ಖಾನ್, ಡಾ. ಶಬಾನ ಮೈಸೂರು, ಡಾ.ಸಿ.ಎಸ್. ಅರುಣ್ ಇದ್ದರು.

ಕೋರ್ಟ್ ಎದುರೇ ಪಾದಾಚಾರಿ ಹಕ್ಕು ಉಲ್ಲಂಘನೆ!

ಪಾದಚಾರಿ ಮಾರ್ಗದಲ್ಲಿ ರೈಲುಬೋಗಿಯಂತಹ ಕಬ್ಬಿಣದ ಕೊಠಡಿ | ಒಂದು ವರ್ಷದಿಂದ ಕಣ್ಮುಚ್ಚಿ ಕುಳಿತ ಪಾಲಿಕೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಮೈಸೂರಿನ ಪಾದಚಾರಿ ಮಾರ್ಗಗಳು ಮಾರಾಟಕ್ಕಿವೆ ಎಂಬುದಕ್ಕೆ ಈ ಚಿತ್ರವೇ ಸಾಕ್ಷಿ.

ಮೈಸೂರಿನ ಚಾಮರಾಜಪುರಂ ಬಡಾವಣೆಯ ವಿಷ್ಣುವರ್ಧನ ರಸ್ತೆಯ ಮನುವನ ಪಾರ್ಕ್ ಬಳಿ ಇರುವ ಈ ಪಾದಚಾರಿ ಮಾರ್ಗದಲ್ಲಿ ರೈಲು ಬೋಗಿಯಂತಹ ಒಂದು ಬೃಹತ್ ಕಬ್ಬಿಣದ ಕೊಠಡಿ ಪ್ರತಿಷ್ಠಾಪನೆಯಾಗಿ ವರ್ಷಗಳು ಉರುಳಿವೆ. ಪಾದ ಚಾರಿ ಮಾರ್ಗದ ಶೇ. 100 ಭಾಗವನ್ನು ಈ ಬೋಗಿ ಕಬಳಿಸಿ ವರುಷಗಳುರುಳಿದರೂ ಪಾಲಿಕೆ ಎಚ್ಚೆತ್ತು ಕೊಂಡಿಲ್ಲ. ಪಾಲಿಕೆಯ ಮೌನವನ್ನು ಗಮನಿಸಿದರೆ ಈ ಪಾದಚಾರಿ ಮಾರ್ಗವನ್ನು ಪಾಲಿಕೆಯು ಘಟಾನುಘಟಿಗಳಿಗೆ ಬಾಡಿಗೆಗೆ ನೀಡಿರಬಹುದು ಅಥವಾ ಮಾರಾಟ ಮಾಡಿರಬಹುದು.



ಫುಟ್ ಪಾತ್ ಮಾರಾಟಕ್ಕಿದೆ !

ಚಾಮರಾಜ ಪುರಂ ಬಡಾವಣೆಯ ಹಿರಿಯ ನಾಗರಿಕರು, ಸುಸಂಸ್ಕೃತರು, ಸಹೃದಯರು ಈ ಭಾಗದಲ್ಲಿ ಸಂಚರಿಸುವಾಗ ನಗರ ಪಾಲಿಕೆಗೆ ಹಿಡಿಶಾಪ ಹಾಕುತ್ತಿದ್ದಾರೆ. ಪಾದಚಾರಿ ಮಾರ್ಗದಲ್ಲಿ ಇಂತಹ ಬೃಹತ್ ಕೊಠಡಿ ಪ್ರತಿಷ್ಠಾಪಿಸಲು ಅನುಮತಿ ನೀಡಿದವರಾರು?

ತೇನ ವಿನಾ ತೃಣಮಪಿ ನ ಚಲತಿ ಎಂಬಂತೆ ಪಾಲಿಕೆಯ ಕೃಪಾಕಟಾಕ್ಷವಿಲ್ಲದೆ ಈ ದೌರ್ಜನ್ಯ ನಡೆಯಲಾಗದು.

ಪಾದಾಚಾರಿ ಮಾರ್ಗದಲ್ಲಿ ಇಂತಹ ಬೃಹತ್ ಬೋಗಿಯನ್ನು ಪ್ರತಿಷ್ಠಾಪಿಸಲು ನಗರ ಪಾಲಿಕೆಗೆ ಸಂದಾಯವಾದ ಮೊತ್ತ ಎಷ್ಟು ಎಂಬುದನ್ನು ಪಾಲಿಕೆಯೇ ಬಹಿರಂಗ ಪಡಿಸಬೇಕಾಗಿದೆ.

ನ್ಯಾಯಾಲಯದ ಎದುರೇ ರಾಜಾರೋಷವಾಗಿ ಪಾದಚಾರಿ ಮಾರ್ಗ ಒತ್ತುವರಿಯಾಗಿ ಪಾದಚಾರಿಗಳ ಹಕ್ಕುಗಳಿಗೆ ಧಕ್ಕೆಯಾಗುತ್ತಿದ್ದರೂ ಕೂಡ ನಗರ ಪಾಲಿಕೆ ಮೌನ ವಹಿಸಿರುವುದನ್ನು ಗಮನಿಸಿದರೆ ನಗರ ಪಾಲಿಕೆಯು ಈ ಪಾದಚಾರಿ ಮಾರ್ಗವನ್ನು ಮಾರಾಟ ಮಾಡಿರುವುದು ಸಾಬೀತಾಗುತ್ತದೆ.

ಮೌನಂ ಸಮ್ಮತಿ ಲಕ್ಷಣಂ!
ಪಾಲಿಕೆಯ ಮೌನ ಭ್ರಷ್ಟಾಚಾರದ ಲಕ್ಷಣ!

ಮೈಸೂರಿನಲ್ಲಿ ಪಾದಚಾರಿಗಳು ಜೀವಭಯದಿಂದ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಪಾದಚಾರಿ ಮಾರ್ಗಗಳು ವ್ಯಾಪಾರಸ್ಥರ ಪಾಲಾಗಿದೆ. ಪಾದಾಚಾರಿ ಮಾರ್ಗದ ಪಕ್ಕದ ಬಹುತೇಕ ಕಟ್ಟಡಗಳು ಕುಸಿಯುವ ಹಂತದಲ್ಲಿದೆ. ಸುಸಜ್ಜಿತ ಪಾದಚಾರಿ ಮಾರ್ಗಗಳು ಉಳ್ಳವರ ಪಾಲಾಗಿದೆ. ಒತ್ತುವರಿಯಾಗದ ಪಾದಚಾರಿ ಮಾರ್ಗಗಳು ಶಿಥಿಲ ವಾಗಿವೆ. ಅಮೇರಿಕದ ದಾಳಿಗೆ ಇರಾನಿನ ಕಟ್ಟಡಗಳು ಧ್ವಂಸವಾಗಿ ಪ್ರಾಣಹಾನಿಯಾಗಿದೆ. ಆದರೆ ಮೈಸೂರಿನಲ್ಲಿ ಪ್ರಾಣಹಾನಿಯಾಗಲು ಯಾವ ಧಾಳಿಯೂ ಆಗಬೇಕಿಲ್ಲ. ನಗರ ಪಾಲಿಕೆ, ಪೊಲೀಸ್, ಜಿಲ್ಲಾಡಳಿತ ಹಾಗೂ ಸರ್ಕಾರದ ನಿರ್ಲಕ್ಷ್ಯವೇ ಸಾಕು.

> **ಕ್ರಮ ಜರುಗಿಸಿ ಇಲ್ಲಿ ಯಾವ ಮಿಸ್ಸೈಲ್ ದಾಳಿ ಆಗಬೇಕಿಲ್ಲ. ಒಂದು ಕಾಂಪೌಂಡ್ ಕುಸಿದರೆ ಸಾಕು. ಹತ್ತಾರು ಪ್ರಾಣಗಳು ಹಾರಿಹೋಗುತ್ತವೆ. ಈ ಕೂಡಲೇ ಪಾಲಿಕೆ ಎಚ್ಚೆತ್ತು ವಿಷ್ಣುವರ್ಧನ ರಸ್ತೆಯ ಮನುವನ ಪಾರ್ಕ್ ಪಕ್ಕದ ಪಾದಚಾರಿ ಮಾರ್ಗದಲ್ಲಿ ಪ್ರತಿಷ್ಠಾಪಿಸಿರುವ ಈ ಬೋಗಿಯನ್ನು ಕಿತ್ತೆಸೆದು ಆ ಬೋಗಿಯನ್ನಿಟ್ಟಿದ್ದ ಬೋಗಿಗಳ ವಿರುದ್ಧ ಕ್ರಮ ಕೈಗೊಂಡು ಪಾದಚಾರಿಗಳಿಗೆ ನ್ಯಾಯ ನೀಡಲಿ.**
> **ನಗರ ಪಾಲಿಕೆಯು ಎಚ್ಚೆತ್ತುಕೊಳ್ಳದಿದ್ದರೆ ಲಕ್ಷ್ಮೀಪುರಂ ಪೊಲೀಸರು ಈ ಅಕ್ರಮಾದಿತ್ಯರ ವಿರುದ್ಧ ತಕ್ಷಣ ಕ್ರಿಮಿನಲ್ ಪ್ರಕರಣ ದಾಖಲಿಸುವುದರ ಜೊತೆಗೆ ನಗರ ಪಾಲಿಕೆ ಆಯುಕ್ತರ ವಿರುದ್ಧವೂ ಕ್ರಮ ಜರುಗಿಸಲಿ.**
> • **ಪಿ.ಜೆ. ರಾಘವೇಂದ್ರ,** ನ್ಯಾಯವಾದಿ, ಮೈಸೂರು.

ವಿದ್ಯಾರ್ಥಿಗಳ ಅಭಿವೃದ್ಧಿಗೆ ಸಾಂಸ್ಕೃತಿಕ ವೇದಿಕೆ ಅಗತ್ಯ

ವಾರ್ಷಿಕೋತ್ಸವದಲ್ಲಿ ಸೆಂಟ್ ಥಾಮಸ್ ಎಜುಕೇಶನ್ ಸೊಸೈಟಿ ಮಾಜಿ ಅಧ್ಯಕ್ಷ ಡಾ.ಆಗಸ್ಟಿನ್ ಅಭಿಮತ

• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಗೆ ಇಂತಹ ಸಾಂಸ್ಕೃತಿಕ ವೇದಿಕೆಗಳು ಅಗತ್ಯ ಎಂದು ಸೆಂಟ್ ಥಾಮಸ್ ಎಜುಕೇಶನ್ ಸೊಸೈಟಿ ಮಾಜಿ ಅಧ್ಯಕ್ಷ ಫಾ.ಡಾ. ಆಗಸ್ಟಿನ್ ತಿಳಿಸಿದರು.

ಶ್ರೀರಾಂಪುರದ ಕ್ರೈಸ್ಟ್ ಕಾಲೇಜು ತನ್ನ ವಾರ್ಷಿಕ ಸಾಂಸ್ಕೃತಿಕ ಹಬ್ಬ ಫಿಯೆಸ್ಟಾ 2ಕೆ26- ದಶಮಾನೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂಸ್ಥೆಯನ್ನು ಶ್ರೇಷ್ಠತೆಯ ಕೇಂದ್ರವಾಗಿ ರೂಪಿಸುವಲ್ಲಿ ಎದುರಾದ ಸವಾಲುಗಳನ್ನು ಅವರು ಉಲ್ಲೇಖಿಸಿ, ಮೌಲ್ಯಾಧಾರಿತ ಶಿಕ್ಷಣದ ಅಗತ್ಯ ಹೆಚ್ಚಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸೆಂಟ್ ಥಾಮಸ್ ಎಜುಕೇಶನ್ ಸೊಸೈಟಿ ಅಧ್ಯಕ್ಷ ಫಾ. ಜೋಬಿ ಕುನ್ನತ್ ಮಾತನಾಡಿ, ವಿದ್ಯಾರ್ಥಿಗಳಿಗೆ ಉತ್ತಮ ಮೌಲ್ಯಗಳನ್ನು ಕಾಪಾಡಿಕೊಂಡು ಶ್ರೇಷ್ಠತೆಯತ್ತ ಮುನ್ನಡೆಯಬೇಕು. ಅಲ್ಲದೆ, 'ವಸುದೈವ ಕುಟುಂಬಕಂ' ಎಂಬ ಮಾತಿನಂತೆ ವೇದಗಳು ಮತ್ತು ಉಪನಿಷತ್ತುಗಳ ಮಹತ್ವವನ್ನು ವಿವರಿಸಿದರು. ಕಾಲೇಜಿನ ವಿದ್ಯಾರ್ಥಿಗಳು ಪ್ರಾರ್ಥನಾ ನೃತ್ಯ ನಡೆಸಿಕೊಟ್ಟರು. ಬಳಿಕ ಗಣ್ಯರು ಸಾಂಪ್ರದಾಯಿಕವಾಗಿ ದೀಪ ಬೆಳಗಿಸಿದರು.



ಕಾಲೇಜಿನ ಪ್ರಾಂಶುಪಾಲ ಫಾ. ಜಿಂಟೋ ಜೋಸ್ ಅವರು ಸ್ವಾಗತ ಭಾಷಣದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಸಂಸ್ಥೆಯ ಬೆಳವಣಿಗೆ ಮತ್ತು ದೃಷ್ಟಿಕೋನವನ್ನು ವಿವರಿಸಿದರು.

ಪೋಷಕರ ಪರವಾಗಿ ರವಿ ಹುಲ್ಕೋಟಿ ಮಾತನಾಡಿ, ಸಂಸ್ಥೆಯ ಪ್ರಗತಿ ಮತ್ತು ವಿದ್ಯಾರ್ಥಿಗಳ ಸಾಧನೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿದರು. ಕಾಲೇಜಿನ ವ್ಯೂ ಬುಕ್ ಬಿಡುಗಡೆಗೊಳಿಸಲಾಯಿತು. ನಂತರ ಗಣ್ಯರು, ಕ್ರೈಸ್ಟ್ ಮೀಡಿಯಾ ಸಂಯೋಜಕಿ ಎಸ್. ಶಿಲ್ಪಾ ಮತ್ತು ವಿದ್ಯಾರ್ಥಿ ಸಂಯೋಜಕಿ ಎಂ.ಎನ್. ಅನುಷಾ ಹಾಗೂ ಜೆಜ್ನೀಲ್ ಲೋಮಿಯೋ ಅವರು ಕ್ರಿಸ್ಟೋಸ್ ವಾರ್ಷಿಕ ವಿಶೇಷ ಸಂಚಿಕೆ ಅನಾವರಣಗೊಳಿಸಿದರು.

ಕಾಲೇಜಿನ ಶೈಕ್ಷಣಿಕ ಸಾಧನೆ ಪರಿಚಯಿಸುವ ವಿಡಿಯೋ ಪ್ರದರ್ಶನ ಹಾಗೂ ಕಳೆದ ದಶಕದಲ್ಲಿ ಸಂಸ್ಥೆಗೆ ಮಹತ್ವದ ಕೊಡುಗೆ ನೀಡಿದ ಮಹನೀಯರಿಗೆ ಸಮರ್ಪಿತ ವಿಶೇಷ ವಿಡಿಯೋ ಕೂಡ ಪ್ರದರ್ಶಿಸಲಾಯಿತು.

ಶೈಕ್ಷಣಿಕ ಹಾಗೂ ಪಠ್ಯೇತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿಭಾಗ ಮಟ್ಟದ ಟಾಪರ್‌ಗಳನ್ನು ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಂಭ್ರಮಕ್ಕೆ ಹೊಸ ಚೈತನ್ಯ ನೀಡಿದವು. ಕಾಲೇಜು ಗಾಯಕ ವೃಂದದ ಸಂಗೀತ ಕಾರ್ಯಕ್ರಮದ ಬಳಿಕ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ನೀಡಿದ ನೃತ್ಯ ಪ್ರದರ್ಶನ ಸೃಜನಶೀಲತೆ ಮತ್ತು ವೈವಿಧ್ಯತೆಯನ್ನು ಪ್ರತಿಬಿಂಬಿಸಿತು.

'ದಲಿತರ ಮನಸ್ಸು ನಿಯಂತ್ರಿಸದಿರಿ'



• **ಕನ್ನಡಪ್ರಭ ವಾರ್ತೆ** ಮೈಸೂರು

ದಲಿತ ಮತ್ತು ಶೋಷಿತ ಸಮುದಾಯಗಳ ಮನಸ್ಸನ್ನು ನಿಯಂತ್ರಿಸುವ ಪ್ರಯತ್ನಗಳಿಗೆ ನಾವು ಅವಕಾಶ ನೀಡಬಾರದು ಎಂದು ನಿವೃತ್ತ ಪ್ರಾಧ್ಯಾಪಕ ಡಿ. ಆನಂದ್ ಹೇಳಿದರು.

ನಗರದ ಯುವರಾಜ ಕಾಲೇಜಿನ ಅಮೃತ ಮಹೋತ್ಸವ ಸಭಾಂಗಣದಲ್ಲಿ ಗುರುವಾರ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ದಲಿತ ಮತ್ತು ಶೋಷಿತ ಸಮುದಾಯಗಳಮನಸ್ಸನ್ನುನಿಯಂತ್ರಿಸುವ ಮಾನಸಿಕ ಬಂಧ ನಗಳಿಂದ ಹೊರಬರಲು ಜ್ಞಾನವೃದ್ಧಿಯೇ ಏಕೈಕ ಮಾರ್ಗ. ಶಿಕ್ಷಣ ಇಲ್ಲದ ಜೀವನ ಶೋಷಣೆಯ ಮೂಲ. ದಲಿತ ಮತ್ತು ಶೋಷಿತ ಸಮುದಾಯಗಳ ಮನಸ್ಸನ್ನು ನಿಯಂತ್ರಿಸುವ ಯತ್ನಕ್ಕೆ ನಾವು ಅವಕಾಶ ಕೊಡಬಾರದು ಎಂದರು.

ವಿದ್ಯಾರ್ಥಿಗಳು ಕೇವಲ ಮಾಹಿತಿ ಪಡೆಯದೆ, ಪ್ರಶ್ನಿಸುವ ಗಣ ಬೆಳೆಸಿಕೊಳ್ಳಬೇಕು. ಆಗ ನಿಜವಾದ ಬದಲಾವಣೆ ಸಾಧ್ಯವಾಗುತ್ತದೆ. ಸರ್ಕಾರ ನೀಡುವ ಶೈಕ್ಷಣಿಕಸೌಲಭ್ಯಗಳನ್ನು ಹಿಂದುಳಿದವರ್ಗಗಳು ಮತ್ತು ದಲಿತ ಸಮುದಾಯಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಶಿಕ್ಷಣವನ್ನು ಕೇವಲ ಪದವಿ ಅಥವಾ ಉದ್ಯೋಗ ಪಡೆಯುವಸಾಧನವಾಗಿನೋಡಬಾರದು. ಉದ್ಯೋಗದ ಲಭ್ಯತೆ ಏನೇ ಇರಲಿ, ಪ್ರತಿಯೊಬ್ಬರೂ ವಿದ್ಯಾವಂತ ರಾಗುವ ಮೂಲಕ ಚಿಂತನಾ ಶಕ್ತಿ ಬೆಳೆಸಿ ಕೊಳ್ಳಬೇಕು ಎಂದು ಅವರು ತಿಳಿಸಿದರು.

ಮೈಸೂರು ವಿವಿ ಕುಲಸಚಿವೆ ಎಂ.ಕೆ. ಸವಿತಾ, ಕಾಲೇಜಿನ ಪ್ರಾಂಶುಪಾಲ ಪ್ರೊ. ಎಸ್. ಮಹದೇವಮೂರ್ತಿ, ಆಡಳಿತಾಧಿಕಾರಿ ಪ್ರೊ.ಎಚ್.ಎಸ್. ಜಯಂತ್ ಹಾಗೂ ಜ್ಞಾನವಾಹಿನಿ ಸಂಚಾಲಕ ಪ್ರೊ. ಸಿ.ಡಿ. ಪರಶುರಾಮ ಮೊದಲಾದವರು ಇದ್ದರು.

ವ್ಯಕ್ತಿತ್ವ ನಿರ್ಮಾಣದ ಒಂದು ಶಕ್ತಿಯುತ ಸಾಧನ ಕ್ರೀಡೆ

ಏಷಿಯನ್ ಗೇಮ್ಸ್ ಮೆಡಲಿಸ್ಟ್ ಎಂ. ವೀಣಾ | ವಿದ್ಯಾವರ್ಧಕ ಕಾಲೇಜಿನ ವಾರ್ಷಿಕ ಕ್ರೀಡಾಕೂಟ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಕ್ರೀಡೆ ಎಂದರೆ ಕೇವಲ ದೇಹ ಶಕ್ತಿಯ ಪ್ರದರ್ಶನವಲ್ಲ, ಅದು ವ್ಯಕ್ತಿತ್ವ ನಿರ್ಮಾಣದ ಒಂದು ಶಕ್ತಿಯುತ ಸಾಧನ ಎಂದು ಅಂತಾರಾಷ್ಟ್ರೀಯ ಖೋ ಖೋ ಆಟಗಾರ್ತಿ, ಏಷಿಯನ್ ಗೇಮ್ಸ್ ಮೆಡಲಿಸ್ಟ್ ಎಂ. ವೀಣಾ ತಿಳಿಸಿದರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ಕ್ರೀಡಾ ವಿಭಾಗವು ಓವೆಲ್ಸ್ ಮೈದಾನದಲ್ಲಿ ಆಯೋಜಿಸಿದ್ದ ವಾರ್ಷಿಕ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ನೀವು ಮೈದಾನದಲ್ಲಿ ಇರಿಸುವ ಪ್ರತಿಯೊಂದು ಹೆಜ್ಜೆಯು ನಿಮ್ಮ ವ್ಯಕ್ತಿತ್ವವನ್ನು ರೂಪಿಸುತ್ತದೆ. ಕ್ರೀಡೆ ನಮ್ಮಲ್ಲಿ ಶಿಸ್ತನ್ನು ಮತ್ತು ಸಹನೆ, ಹೋರಾಟದ ಮನೋಭಾವವನ್ನು ಬೆಳೆಸುತ್ತದೆ ಎಂದು ಹೇಳಿದರು.




ಕ್ರೀಡೆಯಿಂದ ಆರೋಗ್ಯವು ಸುಧಾರಿಸುತ್ತದೆ. ಕ್ರೀಡೆಯಲ್ಲಿ ಸೋಲು- ಗೆಲುವು ಸಹಜ. ಆದರೆ, ನಿಜವಾದ ಗೆಲುವು ನಿಮ್ಮ ಪ್ರಯತ್ನದಲ್ಲಿದೆ. ಸೋತಾಗ ಕುಗ್ಗದೇ ಗೆದ್ದಾಗ ಬೀಗದೆ ಸಮ ಭಾವ ದಿಂದ ಎಲ್ಲವನ್ನು ಸಮವಾಗಿ ಸ್ವೀಕರಿ ಸುವವರೇ ನಿಜವಾದ ಕ್ರೀಡಾಪಟುಗಳು ಎಂದರು.

ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್, ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ಮರೀಗೌಡ ಇದ್ದರು. ದೈಹಿಕ ಶಿಕ್ಷಣ ನಿರ್ದೇಶಕ ಡಾ.ಕೆ.ಎನ್. ಹರೀಪ್ರಸಾದ್ ಸ್ವಾಗತಿಸಿದರು. ಡಾ.ಬಿ.ಎಸ್. ಶ್ರೀಹರ್ಷ ವಂದಿಸಿದರು. ಎಂ. ಹರ್ಷಿತಾ ನಿರೂಪಿಸಿದರು.

ಮಹಿಳೆಯರ ಆರ್ಥಿಕ ಮಟ್ಟ ಸುಧಾರಿಸಿದ ಗ್ಯಾರಂಟಿ ಯೋಜನೆ

ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅಭಿಮತ



• **ಕನ್ನಡಪ್ರಭ ವಾರ್ತೆ** ಮೈಸೂರು

ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳು ಮಹಿಳೆಯರ ಆರ್ಥಿಕ ಮಟ್ಟವನ್ನು ಸುಧಾರಿಸಿವೆ ಎಂದು ಮಾಜಿ ಶಾಸಕ ಎಂ.ಕೆ. ಸೋಮಶೇಖರ್‌ತಿಳಿಸಿದರು.

ಜಯನಗರ ರೈಲ್ವೆಗೇಟ್ ಬಳಿಯ ಪಾಲಿಕೆ ವಲಯ ಕಚೇರಿ-2 ರಲ್ಲಿ ಇತ್ತೀಚೆಗೆ ನಡೆದ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ನೂತನ ಅಧ್ಯಕ್ಷರು ಮತ್ತು ಸದಸ್ಯರ ಅಧಿಕಾರ ಸ್ವೀಕಾರ ಮತ್ತು ಕಚೇರಿ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ರಾಜ್ಯದ ಮೂಲೆ ಮೂಲೆಯಲ್ಲೂ ಕಟ್ಟಕಡೆಯ ವ್ಯಕ್ತಿಗೂ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಒಂದಲ್ಲ ಒಂದು ರೀತಿ ತಲುಪುತ್ತಿದ್ದು, ವಿಶೇಷವಾಗಿ ಮಹಿಳೆಯರ ಆರ್ಥಿಕ ಮಟ್ಟ ಸುಧಾರಣೆಯಾಗಿದೆ ಎಂದರು.

ಅಧಿಕಾರ ಸ್ವೀಕಾರ : ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾಗಿ ಜೆ. ವಿನಯ್ ಕುಮಾರ್, ಸದಸ್ಯರಾಗಿ ಕೆ. ಗಣೇಶ್, ಸಿ. ವೆಂಕಟೇಶ್, ರಾಕೇಶ್, ಕಲೀಂ ಷರೀಫ್, ಎಸ್. ಇಂದಿರಾ, ಎಂ.ಜೆ. ಬಾಲಕೃಷ್ಣ, ಸಿದ್ದಲಿಂಗಯ್ಯ, ಜಗನ್ನಾಥ್ ಭೋವಿ ಅಧಿಕಾರ ಸ್ವೀಕರಿಸಿದರು.

ಶಾಸಕ ಕೆ. ಹರೀಶ್ ಗೌಡ, ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್, ಮಾಜಿ ಮೇಯರ್‌ಗಳಾದ ಟಿ.ಬಿ. ಚಿಕ್ಕಣ್ಣ, ಬಿ.ಎಲ್. ಭೈರಪ್ಪ, ಪುಷ್ಪಲತಾ ಚಿಕ್ಕಣ್ಣ, ಪಾಲಿಕೆ ಮಾಜಿ ಸದಸ್ಯರಾದ ಕೆ.ವಿ. ಮಲ್ಲೇಶ್, ಆರ್. ಎಚ್. ಕುಮಾರ್, ಜಾಕೀರ್‌ಪಾಷಾ, ಎಂ. ಸುನೀಲ್, ಶಾಂತ ವೀರೇಂದ್ರಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ. ಸೋಮಶೇಖರ್, ಕೆ.ಆರ್. ಬ್ಯಾಂಕ್ ಮಾಜಿ ಅಧ್ಯಕ್ಷ ವಾಸು ಮೊದಲಾದವರು ಇದ್ದರು.

ನಗರ ಕಾರ್ಯಕ್ರಮ — 7.5.2026, ಗುರುವಾರ

- ಕ್ಷೇಮಧಾಮ ಟ್ರಸ್ಟ್, ಅರಿವು ಸಂಸ್ಥೆ: ಪ್ಲಾಸ್ಟಿಕ್ ಬಿಡಿ, ಬಟ್ಟೆ ಬ್ಯಾಗ್ ಬಳಸಿ ಜಾಗೃತಿ ಕಾರ್ಯಕ್ರಮ, ಶ್ರೀರಾಂಪುರ, ಬಿಎಸ್‌ಎನ್‌ಎಲ್ ಕಮಾನು ಬಳಿ, ಬೆಳಗ್ಗೆ 8.
- ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ: ಆರೋಗ್ಯಾಯುಷ್ಯ ಆರೋಗ್ಯ ವರ್ಧಕ ಶಿಬಿರ, ಚರ್ಮ ಆರೈಕೆ, ಮಧುಮೇಹ ಚಿಕಿತ್ಸಾ ಶಿಬಿರ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30 ರಿಂದ ಸಂಜೆ 4.30.
- ರಾಮಸನ್ಸ್ ಬೊಂಬೆಮನೆ: ಕ್ರೀಡಾ ಕೌಶಲ್ಯ- ಹಾಸು ಆಟಗಳ ಪ್ರದರ್ಶನ, ಮಾರಾಟ, ನಜರಬಾದ್‌ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7.
- ಸುಯೋಗ್ ಆಸ್ಪತ್ರೆ: ಉಚಿತ ಕೀಲುಮೂಳೆ ತಪಾಸಣೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ ಸಂಜೆ 6.
- ಪ್ರೀತಿ ಕ್ಯಾನ್ಸರ್ ಕೇಂದ್ರ: ಉಚಿತ ತಪಾಸಣಾ ಶಿಬಿರ, ವಾಣಿವಿಲಾಸ ರಸ್ತೆ, ಬೆಳಗ್ಗೆ 10 ರಿಂದ ರಾತ್ರಿ 8.
- ಜೆಎಸ್‌ಎಸ್ ಮಹಾವಿದ್ಯಾಪೀಠ: ಸುವರ್ಣ ಮಹೋತ್ಸವ, 15ನೇ ವಿಶೇಷ ಉಪನ್ಯಾಸ- ಆರ್‌ಎಸ್‌ಎಸ್ ಸರಸಂಘ ಸಂಚಾಲಕ ಡಾ. ಮೋಹನ್ ಭಾಗವತ್, ಸಾನ್ನಿಧ್ಯ- ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಚಾಮುಂಡಿಬೆಟ್ಟದ ತಪ್ಪಲು, ಶ್ರೀ ಸುತ್ತೂರು ಶಾಖಾ ಮಠ, ಬೆಳಗ್ಗೆ 10.
- ಮೌಲಾನ ಅಜಾದ್ ಪ್ರೌಢಶಾಲೆ: ಎಸ್‌ಎಸ್‌ಎಸ್‌ಎಲ್‌ಸಿಯಲ್ಲಿ ಉತ್ತಮ ಅಂಕ ಪಡೆದವರಿಗೆ ಸನ್ಮಾನ, ತ್ಯಾಗರಾಜ ರಸ್ತೆ, ಪತ್ರಕರ್ತರ ಭವನ, ಬೆಳಗ್ಗೆ 11.30.
- ಜೆಎಸ್‌ಎಸ್ ಹಿರಿಯ ಪ್ರಸಾದನಿಲಯಗಳ ವಿದ್ಯಾರ್ಥಿಗಳ ಗೃಹನಿರ್ಮಾಣ ಸಹಕಾರ ಸಂಘ, ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಸಂಘ, ಮೈಸೂರು- ಚಾಮರಾಜನಗರ ಜಿಲ್ಲಾ ಗುಬ್ಬಿ ತೋಟದಪ್ಪನವರ ವಿದ್ಯಾರ್ಥಿ ನಿಲಯಗಳು: ದಾವಣಗೆರೆ ವಿವಿ ಗೌರವ ಡಾಕ್ಟರೇಟ್ ಪಡೆದ ನಿವೃತ್ತ ಡಿಜಿಪಿ ಎಲ್. ರೇವಣಸಿದ್ದಯ್ಯ ಅವರಿಗೆ ಸನ್ಮಾನ, ಸಾನ್ನಿಧ್ಯ- ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ- ಎ.ಎಸ್. ಚನ್ನಬಸಪ್ಪ, ಅಭಿನಂದನಾ ನುಡಿ- ಎಚ್.ಎಸ್. ಚಂದ್ರಮೌಳಿ, ಡಿ.ಪಿ. ಸತೀಶ್, ಜೆ.ಬಿ. ರಂಗಸ್ವಾಮಿ, ವರುಣ, ಶ್ರೀ ಶಿವರಾತ್ರಿ ರಾಜೇಂದ್ರ ಅನುಭವ ಮಂಟಪ, ಮಧ್ಯಾಹ್ನ 2.

ಸಾಂಸ್ಕೃತಿಕ

- ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್: ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ- ಡಾ. ಸುಕನ್ಯಾ ಪ್ರಭಾಕರ್, ಸರಸ್ವತಿಪುರಂ, 13ನೇ ಮೇನ್ ಲೀಲಾ ನಾಗರಾಜ್ ನಿವಾಸ, ನಂ. 510, ಸಂಜೆ 4 ರಿಂದ 6.

ಧಾರ್ಮಿಕ

- ಶ್ರೀ ರಾಮಕೃಷ್ಣ ಆಶ್ರಮ: ಸ್ವಾಮಿ ಜ್ಞಾನಯೋಗಾನಂದಜಿ ಅವರಿಂದ ಉಪನ್ಯಾಸ, ಯಾದವಗಿರಿ, ಸಂಜೆ 6.

16ರಂದು ಅಂತಾರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ

ಮೈಸೂರು: ಅಂತರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ ಮೇ 18 ರಂದು ನಡೆಯಲಿದ್ದು, ಇದರ ಅಂಗವಾಗಿ ಐಕಾಮ್ಸ್2026 ಥೆಮ್ ಮ್ಯೂಸಮ್ಸ್‌ಯೂನಿಟಿಂಗ್‌ಎಡಿವೈಡೆಡ್‌ವಲ್ಡ್/ವಸ್ತುಸಂಗ್ರಹಾಲಯಗಳು ವಿಭಜಿತ ಜಗತ್ತನ್ನು ಒಂದು ಗೂಡಿಸುತ್ತವೆ ಎಂಬ ಥೀಮ್ ಅನ್ವಯ ಇಲಾಖೆ ವತಿಯಿಂದ ಮ್ಯೂಸಿಯಮ್ಸ್ ಆನ್ ವ್ಹೀಲ್ಸ್ ಶೀರ್ಷಿಕೆಯಡಿ, ಶಾಲಾ ಕಾಲೇಜಿನ ವಿದ್ಯಾರ್ಥಿಗಳು, ಸಂಶೋಧಕರು, ಇತಿಹಾಸ ಆಸಕ್ತರು ಹಾಗೂ ಸಾರ್ವಜನಿಕರಿಗೆ ಆಯ್ಕೆ ವಿವಿಧ ಮಾದರಿಯ ವಸ್ತು ಸಂಗ್ರಹಾಲಯಗಳ ವೀಕ್ಷಣೆ ಮಾಡುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೇ 18 ರಂದು ಬೆಳಗ್ಗೆ 8 ಗಂಟೆಗೆ ವೆಲ್ಲಿಂಗ್ಟನ್ ಸರ್ಕಾರಿ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿ, ಇರ್ವಿನ್ ರಸ್ತೆ, ಮೈಸೂರು ಇಲ್ಲಿ ಉದ್ಘಾಟನೆಗೊಂಡು, ಇರ್ವಿನ್ ರಸ್ತೆ ಇಲ್ಲಿ ಮುಕ್ತಾಯಗೊಳ್ಳಲಿದೆ. ಆಸಕ್ತರು ತಮ್ಮ ಹೆಸರನ್ನು ಮೇ 16ರಂದು ಸಂಜೆ 5.30 ಗಂಟೆಯೊಳಗೆ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತರು, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣ, ಇಂದಿರಾನಗರ, ಮೈಸೂರು ಇಲ್ಲಿ ನೇರವಾಗಿ ಅಥವಾ ಇ-ಮೇಲ್ ddheritagemysore@gmail.com ಮತ್ತು commr.amh@yahoo.in ಅಥವಾ ದೂ. 0821-2424671, 2424673 ಮೂಲಕ ನೋಂದಾಯಿಸಿಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಕ್ಯೂರೇಟರ್‌ಎಂ. ಸುನಿಲ್ ಕುಮಾರ್‌ಮೊ. 78294 04796 ಸಂಪರ್ಕಿಸಬಹುದು ಎಂದು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ಕಾಂಗ್ರೆಸ್ ಅವನತಿ ಆರಂಭ: ಮಾಜಿ ಮೇಯರ್ ಶಿವಕುಮಾರ್

• **ಕನ್ನಡಪ್ರಭ ವಾರ್ತೆ** ಮೈಸೂರು

ದುರಾಡಳಿತ, ಜನಾಭಿಪ್ರಾಯಕ್ಕೆ ಮನ್ನಣೆ ನೀಡದೆ ಗಾಂಧಿ ಕುಟುಂಬಕ್ಕೆ ಒತ್ತು ನೀಡುತ್ತಿರುವ ಕಾಂಗ್ರೆಸ್ ಪಂಚರಾಜ್ಯಗಳ ಚುನಾವಣೆಯಲ್ಲಿ ಸೋಲು ಕಂಡು ಅವನತಿ ಶುರುವಾಗಿದ್ದು, ಕರ್ನಾಟಕದಲ್ಲೇ ಕಾಂಗ್ರೆಸ್ ಅಂತ್ಯವಾಗಲಿದೆ ಎಂದು ಮಾಜಿ ಮೇಯರ್ ಶಿವಕುಮಾರ್‌ಹೇಳಿದ್ದಾರೆ.

ಪಶ್ಚಿಮ ಬಂಗಾಳ, ತಮಿಳುನಾಡು, ಅಸ್ಸಾಂ ರಾಜ್ಯಗಳಲ್ಲಿ ಕಾಂಗ್ರೆಸ್ ಎರಡಂಕಿ ಸ್ಥಾನಗಳನ್ನು ದಾಟದೆ ಇರುವುದು ಕಾಂಗ್ರೆಸ್ ಪಕ್ಷದ ಅಸ್ತಿತ್ವವನ್ನೇ ಪ್ರಶ್ನಿಸುವಂತಾಗಿದೆ. ಅಸ್ಸಾಂನಲ್ಲಿ ಕಾಂಗ್ರೆಸ್ ಗೆಲ್ಲಿಸುತ್ತೇನೆಂದು ಉಸ್ತುವಾರಿ ಹೊತ್ತಿದ್ದ ಬಿ.ಕೆ. ಹರಿಪ್ರಸಾದ್, ಡಿ.ಕೆ. ಶಿವಕುಮಾರ್‌ಅವರಿಗೆ ಭಾರೀ ಮುಖಭಂಗವಾಗಿದೆ. ಮಲ್ಲೇಶ್ವರಂ ಕ್ಷೇತ್ರದ ನಗರ ಪಾಲಿಕೆ ಚುನಾವಣೆಯಲ್ಲೂ ಗೆಲ್ಲಲು ಶಕ್ತರಲ್ಲದ ಬಿ.ಕೆ. ಹರಿಪ್ರಸಾದ್ ಅಸ್ಸಾಂ ಚುನಾವಣೆಯಲ್ಲಿ ಗೆಲುವು ಕಂಡಿದ್ದು ಹಾಸ್ಯಾಸ್ಪದ ಎಂದು ಲೇವಡಿ ಮಾಡಿದ್ದಾರೆ.



ದಕ್ಷಿಣಭಾರತದ ರಾಜ್ಯಗಳಲ್ಲಿ ಬಿಜೆಪಿಗೆ ನೆಲೆಯೂರಲು ಅವಕಾಶವಿಲ್ಲ ಎಂದು ಹಾಗೂ ಬಿಜೆಪಿ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದ ಎಂ.ಕೆ. ಸ್ಟಾಲಿನ್ ನೇತೃತ್ವದ ಡಿಎಂಕೆ ದೊಡ್ಡ ಪಾಠ ಕಲಿಯುವಂತಾಗಿದೆ. ಪ್ರಧಾನಿ ನರೇಂದ್ರಮೋದಿ ಅವರ ನಾಯಕತ್ವಕ್ಕೆ ಮತದಾರರು ಮನ್ನಣೆ ನೀಡಿರುವುದು ಸಾಬೀತಾಗಿದೆ ಎಂದು ಹೇಳಿದ್ದಾರೆ.

ಕರ್ನಾಟಕದಲ್ಲಿ ಮೂರು ವರ್ಷಗಳಿಂದ ಆಡಳಿತ ನಡೆಸುತ್ತಿರುವ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಲ್ಲಾ ರಂಗಗಳಲ್ಲೂ ವಿಫಲವಾಗಿದೆ. 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಅವನತಿಯಾಗುವುದು ನಿಶ್ಚಿತವಾಗಿದೆ ಎಂದು ಅವರು ಭವಿಷ್ಯ ನುಡಿದಿದ್ದಾರೆ.

ದೇವರಾಜ ಮಾರ್ಕೆಟ್ ಕೆಡವದಂತೆ ಸುಪ್ರೀಂ ಕೋರ್ಟ್ ಆದೇಶ

• **ಪಿಟಿಐ** ನವದೆಹಲಿ

ಸಾಂಸ್ಕೃತಿಕ ನಗರಿ ಮೈಸೂರಿನ ಐತಿಹಾಸಿಕ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡ ಕೆಡವದಂತೆ ಸುಪ್ರೀಂ ಕೋರ್ಟ್ ಮಹತ್ವದ ಆದೇಶ ನೀಡಿದೆ. ಇದರ ಬದಲಾಗಿ ಅಗತ್ಯ ನವೀಕರಣ ಕಾರ್ಯ ಮಾಡಿ ರಕ್ಷಿಸುವಂತೆ ಸೂಚಿಸಿದೆ.

ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡ ನೆಲಸಮ ಮಾಡಿ, ಮರು ನಿರ್ಮಾಣಕ್ಕೆ 2023ರಲ್ಲಿ ಕರ್ನಾಟಕ ಸರ್ಕಾರ ಮುಂದಾಗಿತ್ತು. ಇದನ್ನ ವಿರೋಧಿಸಿ ಕರ್ನಾಟಕ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿತ್ತು. ಆದರೆ ಈ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಆ ಬಳಿಕ ಈ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಈ ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾ। ಜೆ.ಪಿ. ಪರ್ದಿವಾಲ ಮತ್ತು ನ್ಯಾ। ವಿಜಯ್ ಬಿಷ್ಣೋಯಿ ಅವರ ಪೀಠ ರೂರ್ಕಿಯ ಭಾರತೀಯ ತಂತ್ರಜ್ಞಾನ ಸಂಸ್ಥೆಗೆ (ಐಐಟಿ) ಕಟ್ಟಡದ ಪ್ರಸ್ತುತ ಸ್ಥಿತಿಗತಿ ಬಗ್ಗೆ ನೀಡಲು ಸೂಚಿಸಿತ್ತು. ಅದರಂತೆ ಸಮಿತಿ ಈ ಕಟ್ಟಡಗಳು ನವೀಕರಣಕ್ಕೆ ಯೋಗ್ಯ ಎಂದು ವರದಿ ನೀಡಿತ್ತು.

ಈ ವರದಿ ಆಧರಿಸಿ ಮೇ 4ರಂದು ಆದೇಶ ಪ್ರಕಟಿಸಿರುವ ಸುಪ್ರೀಂ ಕೋರ್ಟ್ 'ಎರಡೂ ಕಟ್ಟಡಗಳನ್ನು ರಕ್ಷಿಸಬೇಕು, ಅಗತ್ಯ ನವೀಕರಣ ಕಾರ್ಯಗಳನ್ನು ಕೈಗೊಳ್ಳಬೇಕು. ಈ ಕಟ್ಟಡಗಳಿಗೆ ಯಾವುದೇ ಹಾನಿಯಾಗದಂತೆ ನೋಡಿಕೊಳ್ಳಬೇಕು' ಎಂದು ಆದೇಶಿಸಿದೆ. ನಂತರ ವಿಚಾರಣೆಯನ್ನು ಜು.30ಕ್ಕೆ ಮುಂದೂಡಿದೆ.

ದೇವರಾಜ ಮಾರ್ಕೆಟ್ 1880ರಲ್ಲಿ ನಿರ್ಮಾಣವಾಗಿದ್ದ ಪಾರಂಪರಿಕ ಕಟ್ಟಡ. ಮೈಸೂರು ಮಹಾರಾಜರ ಕಾಲದಲ್ಲಿ ನಿರ್ಮಾಣವಾಗಿತ್ತು.

ಸಿದ್ದಲಿಂಗ ಪ್ರಸಾದ್‌ಗೆ 5ನೇ ಸ್ಥಾನ

ಮೈಸೂರು: ಫೆಡರೇಷನ್‌ಆಫ್ ಇಂಡಿಯನ್ ಫೋಟೋಗ್ರಫಿ ವತಿಯಿಂದ ಆಯೋಜಿದ್ದ ಛಾಯಾಚಿತ್ರ ಸ್ಪರ್ಧೆಗಳಲ್ಲಿ ಭಾಗವಹಿಸಿ ಗಳಿಸಿದ ಫಲಿತಾಂಶಗಳನ್ನು ಆಧರಿಸಿ ನೀಡುವ ವಾರ್ಷಿಕ ಉತ್ತಮ ಛಾಯಾಚಿತ್ರ ಪ್ರದರ್ಶಕರ ಪ್ರಶಸ್ತಿ ಪಟ್ಟಿಯಲ್ಲಿ ನಗರದ ಕೆ.ಜಿ. ಸಿದ್ದಲಿಂಗಪ್ರಸಾದ್ ಸ್ಥಾನ ಗಳಿಸಿದ್ದಾರೆ. ಇವರು ಅಂತಾರಾಷ್ಟ್ರೀಯ ಮಟ್ಟದಲ್ಲಿ 5 ನೇ ಸ್ಥಾನ, ರಾಷ್ಟ್ರೀಯ ಮಟ್ಟದಲ್ಲಿ 3ನೇ ಸ್ಥಾನ ಪಡೆದುಕೊಂಡಿದ್ದಾರೆ. ಇದರ ಜತೆಗೆ ಅತಿಹೆಚ್ಚು ಪ್ರದರ್ಶನಕಂಡ 20 ಛಾಯಾಚಿತ್ರಗಳ ಪಟ್ಟಿಯನ್ನೂ ಕೂಡ ಪ್ರಕಟಿಸಿದ್ದು ಈ ಪಟ್ಟಿಯಲ್ಲಿ ಇವರ 6 ಚಿತ್ರಗಳು ಕ್ರಮವಾಗಿ 3,4,6,8,14 ಹಾಗೂ 16ನೇ ಸ್ಥಾನ ಪಡೆದುಕೊಂಡಿವೆ.



ಕೆ.ಜಿ. ಸಿದ್ದಲಿಂಗ ಪ್ರಸಾದ್ ಅವರು ಹಲವು ವರ್ಷಗಳಿಂದ ಛಾಯಾಗ್ರಹಣ ಕ್ಷೇತ್ರದಲ್ಲಿ ಸೇವೆಸಲ್ಲಿಸುತಿದ್ದು ವನ್ಯಜೀವಿ ಛಾಯಾಗ್ರಹಣವನ್ನು ಹವ್ಯಾಸವಾಗಿ ರೂಢಿಸಿಕೊಂಡಿದ್ದಾರೆ. ಹಲವು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸಿ ಸುಮಾರು 600ಕ್ಕೂ ಹೆಚ್ಚು ಪ್ರಶಸ್ತಿಗಳನ್ನು ಗಳಿಸಿದ್ದಾರೆ.

9ಕ್ಕೆ ಕಥೆ ಕೇಳೋಣ ಬನ್ನಿ

ಮೈಸೂರು: ಕಲಾಸುರುಚಿ ರಂಗಮನೆಯು ಮೇ 9 ರಂದು ಸಂಜೆ 4.30 ರಿಂದ 5.30 ರವರೆಗೆ ಕಥೆ ಕೇಳೋಣ ಬನ್ನಿ 931ರ ಕಾರ್ಯಕ್ರಮ ಆಯೋಜಿಸಿದ್ದು, ಮೈಸೂರು ವೆಸ್ಟ್ ಲಯನ್‌ಸ್ಸೇವಾ ನಿಕೇತನ ಶಾಲೆಯ ಉಷಾ ರಾಘವನ್ ಮಕ್ಕಳಿಗೆ ಕಥೆ ಹೇಳುವರು.

ಎಸ್ಸೆಸ್ಸೆಲ್ಸಿ ಟಾಪರ್ಸ್‌ಗೆ ರೋಟರಿ ಗಾಯತ್ರಿ ಶಿಕ್ಷಣ ಪ್ರಶಸ್ತಿ

ಮೈಸೂರು: ಎಸ್‌ಎಸ್‌ಎಲ್‌ಸಿ ಹಾಗೂ ಸಿಬಿಎಸ್‌ಇ ಟಾಪರ್‌ಗಳಿಗೆ ರೋಟರಿ ಗಾಯತ್ರಿ ಶಿಕ್ಷಣ ಪ್ರಶಸ್ತಿ ನೀಡಲಾಗುವುದು. ರಾಜ್ಯ ಕ್ರಮದಲ್ಲಿ 620ಕ್ಕಿಂತ, ಕೇಂದ್ರ ಪಠ್ಯಕ್ರಮದಲ್ಲಿ ಶೇ.98 ರಷ್ಟು ಅಂಕ ಪಡೆದ ನಗರದ ವಿದ್ಯಾರ್ಥಿಗಳು ತಮ್ಮ ಶಾಲೆಗಳ ಮೂಲಕ ಮೇ 14 ರೊಳಗೆ ಜೆಎಲ್‌ಬಿ ರಸ್ತೆಯ ರೋಟರಿ ಕಾರ್ಯದರ್ಶಿಗೆ ಅರ್ಜಿ ಸಲ್ಲಿಸಬೇಕು. ವಿವರಗಳಿಗೆ ಮೊ.96325 03181 ಸಂಪರ್ಕಿಸಬಹುದು.

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)
CIN : L65110TN2014PLC097792
ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031.
ದೂ: +91 44 4564 4000/ ಫ್ಯಾಕ್ಸ್: +91 44 4564 4022

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ ಸೂಚನೆ

ಕೆಳಕಂಡ ಸಾಲಗಾರರು ಮತ್ತು ಸಹ-ಸಾಲಗಾರರು ಕೆಳಕಂಡಂತೆ ವಿವರಿಸಲಾದ ಭದ್ರತಾ ಸಾಲಗಳನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ನಿಂದ ಪಡೆದಿರುತ್ತಾರೆ. ಹೀಗೇ ಪಡೆದ ಸಾಲಗಳಿಗೆ ಸಾಲಗಾರರು ಸಹ ಸಾಲಗಾರರು ಸಂಬಂಧಿಸಿದ ಆಸ್ತಿಗಳನ್ನು ಅಡಮಾನ ಮಾಡಿ ಭದ್ರತೆ ಒದಗಿಸಿರುತ್ತಾರೆ. ಇವರುಗಳು ಸಂಬಂಧಪಟ್ಟ ಸಾಲಗಳ ಕರಾರುಪತ್ರದ ಷರತ್ತು ಮತ್ತು ನಿಬಂಧನೆಗಳಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ಆದುದರಿಂದ ಅವರ ಸಾಲದ ಖಾತೆಗಳು ಅನಿಯಮಿತವಾಗಿದ್ದರಿಂದ ಆರ್‌ಬಿಐ ಮಾರ್ಗದರ್ಶನಗಳಂತೆ ಎನ್‌ಪಿಎ ಎಂಬುದಾಗಿ ವರ್ಗೀಕರಿಸಲಾಗಿದೆ. ನಿರ್ದಿಷ್ಟವಾಗಿ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತವಾದ ನೋಟೀಸ್‌ಗಳನ್ನು ಜಾರಿಮಾಡಿ ಬಾಕಿ ಸಾಲ, ಸಂಬಂಧಪಟ್ಟ ದಿನಾಂಕದಿಂದ ಕರಾರಿನ ತದನಂತರದ ಬಡ್ಡಿಯು ಅನ್ವಯಿಸಲಿದೆ ಮತ್ತು ಇದನ್ನು ಒಪ್ಪಂದದ ದರದಂತೆ ಅವರ ಸಂಬಂಧಿಸಿದ ದಿನಾಂಕಗಳಿಂದ ವಿಧಿಸಲಾಗುವುದು. ಬಾಕಿ ಮೊತ್ತವನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

ಕ್ರ. ಸಂ.	ಸಾಲ ಖಾತೆ ಸಂ.	ಸಾಲದ ವಿಧ	ಸಾಲಗಾರರ ಮತ್ತು ಸಹ-ಸಾಲಗಾರರ ಹೆಸರು	ಸೆಕ್ಷನ್ 13(2)ರಡಿ ನೋಟೀಸ್ ದಿನಾಂಕ	ಸೆಕ್ಷನ್ 13(2)ರ ನೋಟೀಸ್ ನಂತೆ ಬಾಕಿ ಮೊತ್ತ
1	118389415	ಆಸ್ತಿ ಎದುರಾಗಿ ಸಾಲ	1. ಮಹಾದೇವಮ್ಮ ಆರ್ 2. ರಂಗಸ್ವಾಮಿನಾಯಕ ಬಿ	23.04.2026	ಐಎನ್‌ಆರ್ 4,99,878.88/-
ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಅಸೆಸ್‌ಮೆಂಟ್ ಸಂ. 669, ಆರ್‌ಡಿಪಿಆರ್ ಸಂ.150800104100100956, ನಂಜೆದೇವನಪುರ ಗ್ರಾಮ ಪಂಚಾಯತ್ ಕಚೇರಿಯಿಂದ ನೀಡಲಾದ ಫಾರಂ ಸಂಖ್ಯೆ 11ಬಿ ಪ್ರಕಾರ, ತಮ್ಮಡಹಳ್ಳಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ: ಚಾಮರಾಜನಗರ, ಕರ್ನಾಟಕ-571128, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ -9.144 ಮೀ. ಮತ್ತು ಉತ್ತರದಿಂದ ದಕ್ಷಿಣಕ್ಕೆ: 12.192 ಮೀ.ಗಳು, ಒಟ್ಟು ಅಳತೆ: 111.46 ಚ.ಮೀ.ಗಳು ಸೇರಿದಂತೆ ಕಟ್ಟಡದ ಅಳತೆ: 111.46 ಚ.ಮೀ.ಗಳು, ಮತ್ತು **ಚಕ್ಕುಬಂದಿ: ಪೂರ್ವಕ್ಕೆ: ನಾಗಮ್ಮ W/o ಬೆಳ್ಳನಾಯ್ಕ್‌ರವರ ಖಾಲಿ ನಿವೇಶನ, ಪಶ್ಚಿಮಕ್ಕೆ: ಬಸವನಾಯಕನವರ ಮನೆ, ಉತ್ತರಕ್ಕೆ: ಟಿ.ಪಿ. ಸುಬ್ಬನಾಯ್ಕನವರ ಆಸ್ತಿ, ದಕ್ಷಿಣಕ್ಕೆ- ರಸ್ತೆ.**					
2	145099180	ಆಸ್ತಿ ಎದುರಾಗಿ ಸಾಲ	1. ನಾಗೇಂದ್ರ ಬಿ 3. ಶಶಿಕಲಾ ಎನ್	13.04.2026	ಐಎನ್‌ಆರ್ 8,71,992.63/-/-
ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಅಸೆಸ್ಮೆಂಟ್ ಸಂ. 87/ಬಿ2, ಆರ್‌ಡಿಪಿಆರ್ ಸಂ. 150800400300620048, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಕಚೇರಿಯಿಂದ ನೀಡಲಾದ ಫಾರಂ ಸಂಖ್ಯೆ 9 ಮತ್ತು 11ಎ ಪ್ರಕಾರ, ದುಗ್ಗಹಟ್ಟಿ ಗ್ರಾಮ ಪಂಚಾಯತ್, ದುಯಂ ಕಂದಹಳ್ಳಿ ಗ್ರಾಮ, ಯಳಂದೂರು ತಾಲ್ಲೂಕು ಮತ್ತು ಚಾಮರಾಜನಗರ ಜಿಲ್ಲೆ ಕರ್ನಾಟಕ - 571441, ಅಳತೆ: ಪೂರ್ವದಿಂದ ಪಶ್ಚಿಮಕ್ಕೆ-10.363 ಮೀ.ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ :6.400 ಮೀ.ಗಳು, ಒಟ್ಟು ಅಳತೆ: 66.33 ಚದರ ಮೀ.ಗಳು ಕಟ್ಟಡದ ಅಳತೆ: 66.33 ಚದರ ಮೀ.ಗಳು ಮತ್ತು ಚಕ್ಕುಬಂದಿ: ಪೂರ್ವಕ್ಕೆ: **ನಾಗಮ್ಮ W/o ಬಂಗಾರನಾಯಕನವರ ಮನೆ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಭಾಗ್ಯ W/o ಲೇಟ್ ಬಿಳಿಗಿರಿರಂಗನಾಯಕರವರ ಮನೆ.**					

ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಬಾಕಿ ಸಾಲದ ಮೊಬಲಗು ಹಾಗೂ ಸಂಬಂಧಪಟ್ಟ ದಿನಾಂಕದಿಂದ ಕರಾರಿನ ದರದಂತೆ ಬಡ್ಡಿ ,ಕಾಸ್ಟ್ , ಛಾರ್ಜ್ ಗಳು ಇತ್ಯಾದಿ ಸೇರಿದ ಮೊತ್ತವು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)ಗೆ ಬಾಕಿಯಾಗಿರುತ್ತೀರಿ. ಈ ನೋಟೀಸು ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಪಾವತಿ ಮಾಡುವುದು ವಿಫಲರಾದಲ್ಲಿ ಕೆಳಸಹಿದಾರರು, ಅನಿವಾರ್ಯವಾಗಿ ಸರ್ಫೇಸಿ ಕಾಯಿದೆಯ 13(4) ಮತ್ತು 14ರಂತೆ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿ ಮೇಲೆ ತಿಳಿಸಿದ ಆಸ್ತಿಗಳನ್ನು ಬಾಕಿ ಸಾಲ ವಸೂಲಾತಿಗಾಗಿ ಸ್ವಾಧೀನ ಪಡಿಸಿಕೊಂಡು ಮಾರಾಟ ಮಾಡುತ್ತಾರೆ. ಆದುದರಿಂದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಸಾಲಕ್ಕಾಗಿ ಅಡಮಾನ ಮಾಡಿರುವ ಆಸ್ತಿಗಳನ್ನು ಮಾರಾಟ/ಲೀಸ್ ಅಥವಾ ಇತರೇ ರೀತಿಯಲ್ಲಿ ಕಲಂ 13(13)ರಂತೆ, ವರ್ಗಾವಣೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

ದಿನಾಂಕ: 07.05.2026
ಸ್ಥಳ: ಚಾಮರಾಜನಗರ, ಕರ್ನಾಟಕ

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್

IDFC FIRST Bank

(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)
CIN : L65110TN2014PLC097792
ನೋಂದಾಯಿತ ಕಛೇರಿ: ಕೆಆರ್‌ಎಂ ಟವರ್, 8ನೇ ಮಹಡಿ, ಹ್ಯಾರಿಂಗ್‌ಟನ್ ರಸ್ತೆ, ಚೆಟ್‌ಪೇಟ್, ಚೆನ್ನೈ-600031.
ದೂ: +91 44 4564 4000/ ಫ್ಯಾಕ್ಸ್: +91 44 4564 4022

2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆಯ ಕಲಂ 13(2)ರಡಿ ಸೂಚನೆ

ಕೆಳಕಂಡ ಸಾಲಗಾರರು ಮತ್ತು ಸಹ-ಸಾಲಗಾರರು ಕೆಳಕಂಡಂತೆ ವಿವರಿಸಲಾದ ಭದ್ರತಾ ಸಾಲಗಳನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ನಿಂದ ಪಡೆದಿರುತ್ತಾರೆ. ಹೀಗೇ ಪಡೆದ ಸಾಲಗಳಿಗೆ ಸಾಲಗಾರರು ಸಹ ಸಾಲಗಾರರು ಸಂಬಂಧಿಸಿದ ಆಸ್ತಿಗಳನ್ನು ಅಡಮಾನ ಮಾಡಿ ಭದ್ರತೆ ಒದಗಿಸಿರುತ್ತಾರೆ. ಇವರುಗಳು ಸಂಬಂಧಪಟ್ಟ ಸಾಲಗಳ ಕರಾರುಪತ್ರದ ಷರತ್ತು ಮತ್ತು ನಿಬಂಧನೆಗಳಂತೆ ನಡೆದುಕೊಳ್ಳಲು ವಿಫಲರಾಗಿರುತ್ತಾರೆ. ಆದುದರಿಂದ ಅವರ ಸಾಲದ ಖಾತೆಗಳು ಅನಿಯಮಿತವಾಗಿದ್ದರಿಂದ ಆರ್‌ಬಿಐ ಮಾರ್ಗದರ್ಶನಗಳಂತೆ ಎನ್‌ಪಿಎ ಎಂಬುದಾಗಿ ವರ್ಗೀಕರಿಸಲಾಗಿದೆ. ನಿರ್ದಿಷ್ಟವಾಗಿ ಕೆಳಗಿನ ಪಟ್ಟಿಯಲ್ಲಿ ತಿಳಿಸಿರುವಂತೆ ನಿಗದಿತವಾದ ನೋಟೀಸ್‌ಗಳನ್ನು ಜಾರಿಮಾಡಿ ಬಾಕಿ ಸಾಲ, ಸಂಬಂಧಪಟ್ಟ ದಿನಾಂಕದಿಂದ ಕರಾರಿನ ತದನಂತರದ ಬಡ್ಡಿಯು ಅನ್ವಯಿಸಲಿದೆ ಮತ್ತು ಇದನ್ನು ಒಪ್ಪಂದದ ದರದಂತೆ ಅವರ ಸಂಬಂಧಿಸಿದ ದಿನಾಂಕಗಳಿಂದ ವಿಧಿಸಲಾಗುವುದು. ಬಾಕಿ ಮೊತ್ತವನ್ನು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಪಾವತಿ ಮಾಡಲು ಸೂಚಿಸಲಾಗಿರುತ್ತದೆ.

ಕ್ರ. ಸಂ.	ಸಾಲ ಖಾತೆ ಸಂ.	ಸಾಲದ ವಿಧ	ಸಾಲಗಾರರ ಮತ್ತು ಸಹ-ಸಾಲಗಾರರ ಹೆಸರು	ಸೆಕ್ಷನ್ 13(2)ರಡಿ ನೋಟೀಸ್ ದಿನಾಂಕ	ಸೆಕ್ಷನ್ 13(2)ರ ನೋಟೀಸ್ ನಂತೆ ಬಾಕಿ ಮೊತ್ತ
1	159677487 & 106598387	ಆಸ್ತಿ ಎದುರಾಗಿ ಸಾಲ	1. ರತ್ನಮ್ಮ ಎಸ್, 2. ಶಿವಮಲ್ಲು ಎಸ್	17.04.2026	ಐಎನ್‌ಆರ್ 7,88,978.02/-
ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಖಾತಾ ಸಂ.-216/67, ಯುನಿಕ್ ಐಡಿ ಸಂ.152200511149000130, ವಿಸ್ತೀರ್ಣ: ಪೂರ್ವದಿಂದ ಪಶ್ಚಿಮಕ್ಕೆ 12.192 ಮೀ.ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ: 9.144 ಮೀ.ಗಳು, ಒಟ್ಟು ಅಳತೆ 111.48 ಚ.ಮೀ.ಗಳು, ಕಟ್ಟಡದ 94.78 ಚದರ ಮೀಟರ್‌ಗಳ ಅಳತೆಯುಳ್ಳ ಕಟ್ಟಡ ಸೇರಿದಂತೆ, ಬೆಳಗುಂಡ ಗ್ರಾಮ, ಬಿಳಿಗೆರೆ ಗ್ರಾಮ ಪಂಚಾಯಿತಿ, ಬಿಳಿಗೆರೆ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ, ಕರ್ನಾಟಕ- 571129 ಮತ್ತು **ಚಕ್ಕುಬಂದಿ: ಪೂರ್ವಕ್ಕೆ: ನಿಂಗಯ್ಯನವರ ಖಾಲಿ ನಿವೇಶನ, ಪಶ್ಚಿಮಕ್ಕೆ: ಬಸವಯ್ಯನವರ ಮನೆ ಉತ್ತರಕ್ಕೆ: ನಂಜಯ್ಯನವರ ಮನೆ, ದಕ್ಷಿಣಕ್ಕೆ: ರಸ್ತೆ.**					
2	162183869	ಆಸ್ತಿ ಎದುರಾಗಿ ಸಾಲ	1. ಮಂಜು ವಿ 2. ಯಶೋಧ ಎಂ	13.04.2026	ಐಎನ್‌ಆರ್ 9,45,164.66/-
ಆಸ್ತಿ ವಿಳಾಸ: ಸಕಲ ಸಮಸ್ತವೂ ಸೇರಿದಂತೆ ಆಸ್ತಿಯ ಖಾತಾ ಸಂ. 193/193, ಇ-ಖಾತಾ ಸಂ. 152200200500900222, ಅಳತೆ ಪೂರ್ವದಿಂದ ಪಶ್ಚಿಮಕ್ಕೆ 8.08 ಮೀ.ಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 11.28 ಮೀಟರ್‌ಗಳು, ಒಟ್ಟು ಅಳತೆ 91.09 ಚ.ಮೀ.ಗಳು ಮತ್ತು 91.09 ಚದರ ಮೀಟರ್‌ಗಳ ಅಳತೆಯುಳ್ಳ ಕಟ್ಟಡ ಸೇರಿದಂತೆ, ರಂಗಯ್ಯನಕೊಪ್ಪಲು ಗ್ರಾಮ, ಬಿಳಿಕೆರೆ ಹೋಬಳಿ, ಬೋಳನಹಳ್ಳಿ ಗ್ರಾಮ ಪಂಚಾಯತ್ ಮಿತಿಗೊಳಪಟ್ಟಿದೆ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ, ಕರ್ನಾಟಕ- 571103, ಮತ್ತು **ಚಕ್ಕುಬಂದಿ: ಪೂರ್ವಕ್ಕೆ: ಗಲ್ಲಿ ಮತ್ತು ಸಿದ್ದಯ್ಯನವರ ಮನೆ, ಪಶ್ಚಿಮಕ್ಕೆ: ಗಲ್ಲಿ ಮತ್ತು ಶಿವಯ್ಯನವರ ಮನೆ ಉತ್ತರಕ್ಕೆ: ಗಲ್ಲಿ ಮತ್ತು ಸುಶೀಲಮ್ಮನ ಮನೆ ದಕ್ಷಿಣಕ್ಕೆ: ರಸ್ತೆ.**					

ಮೇಲಿನ ಪಟ್ಟಿಯಲ್ಲಿ ತೋರಿಸಿದಂತೆ ಬಾಕಿ ಸಾಲದ ಮೊಬಲಗು ಹಾಗೂ ಸಂಬಂಧಪಟ್ಟ ದಿನಾಂಕದಿಂದ ಕರಾರಿನ ದರದಂತೆ ಬಡ್ಡಿ ,ಕಾಸ್ಟ್ , ಛಾರ್ಜ್ ಗಳು ಇತ್ಯಾದಿ ಸೇರಿದ ಮೊತ್ತವು ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)ಗೆ ಬಾಕಿಯಾಗಿರುತ್ತೀರಿ. ಈ ನೋಟೀಸು ಪ್ರಕಟಣೆಗೊಂಡ 60 ದಿನಗಳ ಒಳಗಾಗಿ ಪಾವತಿ ಮಾಡುವುದು ವಿಫಲರಾದಲ್ಲಿ ಕೆಳಸಹಿದಾರರು, ಅನಿವಾರ್ಯವಾಗಿ ಸರ್ಫೇಸಿ ಕಾಯಿದೆಯ 13(4) ಮತ್ತು 14ರಂತೆ ಕಾನೂನಿನ ಕ್ರಮಗಳನ್ನು ಕೈಗೊಳ್ಳಲು ಆರಂಭಿಸಿ ಮೇಲೆ ತಿಳಿಸಿದ ಆಸ್ತಿಗಳನ್ನು ಬಾಕಿ ಸಾಲ ವಸೂಲಾತಿಗಾಗಿ ಸ್ವಾಧೀನಪಡಿಸಿಕೊಂಡು ಮಾರಾಟ ಮಾಡುತ್ತಾರೆ. ಆದುದರಿಂದ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ) ಸಾಲಕ್ಕಾಗಿ ಅಡಮಾನ ಮಾಡಿರುವ ಆಸ್ತಿಗಳನ್ನು ಮಾರಾಟ/ಲೀಸ್ ಅಥವಾ ಇತರೇ ರೀತಿಯಲ್ಲಿ ಕಲಂ 13(13)ರಂತೆ, ವರ್ಗಾವಣೆ ಮಾಡದಂತೆ ನಿಮ್ಮನ್ನು ಪ್ರತಿಬಂಧಿಸಲಾಗಿದೆ.

ಸಹಿ/- ಅಧಿಕೃತ ಅಧಿಕಾರಿ
ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಎಂಬುದಾಗಿತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ವಿಲೀನಗೊಂಡಿದೆ ಮತ್ತು ಪ್ರಸ್ತುತ ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಲಿಮಿಟೆಡ್ ಎಂಬುದಾಗಿದೆ)

ದಿನಾಂಕ: 07.05.2026
ಸ್ಥಳ: ಮೈಸೂರು-ಕರ್ನಾಟಕ

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸು-ವುದೇನೆಂದರೆ, ನನ್ನ ಕಕ್ಷಿಗಾರರಾದ ಶ್ರೀ ಅರುಣ್ ರಘು ಹಾಗೂ ಡಾ. ಶ್ವೇತಾ ಲೂಥ್ರರವರುಗಳು ಈ ಕೆಳಗೆ ವಿವರಿಸಲಾದ ಸ್ಥಿರಾಸ್ತಿಯನ್ನು ಅದರ ಸಂಪೂರ್ಣ ಮಾಲೀಕರು ತಾವೇ ಎಂದು ತಿಳಿಸುವ ಶ್ರೀಮತಿ ಸುಶೀಲಮ್ಮ ಕೋಂ ಲೇಟ್ ಪುಟ್ಟಸ್ವಾಮಪ್ಪ ಎಂಬುವವರಿಂದ ಖರೀದಿ ಮಾಡಲು ಇಚ್ಛಿಸಿರುತ್ತಾರೆ. ಸದರಿ ಖರೀದಿಗೆ ವಿರೋಧಿಸುವ ಯಾವುದೇ ವ್ಯಕ್ತಿ ಯಾ ಸಂಸ್ಥೆ ಅಥವಾ ಸದರಿ ಸ್ಥಿರಾಸ್ತಿಯ ಮೇಲೆ ಯಾವುದೇ ಹಕ್ಕು, ಸ್ವಾಮ್ಯ, ಆಸಕ್ತಿ, ಮಾಲೀಕತ್ವ, ಕ್ಲೇಮು ಇತ್ಯಾದಿಗಳನ್ನು ಹೊಂದಿರುವ ಯಾವನೇ ವ್ಯಕ್ತಿ ಯಾ ಸಂಸ್ಥೆ ಈ ಕೆಳಸಹಿದಾರರಿಗೆ, ಈ ಪ್ರಕಟಣೆಯ 5(ಐದು) ದಿನಗಳೊಳಗಾಗಿ ಸಂಬಂಧಿಸಿದ ದಾಖಲಾತಿಗಳೊಂದಿಗೆ ಲಿಖಿತ ಮಾಹಿತಿ/ತಕರಾರು ನೀಡಲು ತಿಳಿಸಿದೆ. ತಪ್ಪಿದಲ್ಲಿ, ಮೇಲೆ ಹೆಸರಿಸಲಾದ ಮಾಲೀಕರೇ ಈ ಕೆಳಕಂಡ ಸ್ಥಿರಾಸ್ತಿಯ ಸಂಪೂರ್ಣ ಮಾಲೀಕರಂತಲೂ ಹಾಗೂ ಸದರಿ ಸ್ಥಿರಾಸ್ತಿಯ ಮೇಲೆ ಯಾವನೇ ವ್ಯಕ್ತಿ ಯಾ ಸಂಸ್ಥೆಗೆ ಯಾವುದೇ ರೀತಿಯ ಹಕ್ಕು ಆಸಕ್ತಿ, ಕ್ಲೇಮು ಇತ್ಯಾದಿಗಳು ಇಲ್ಲವೆಂದೂ, ಒಂದು ವೇಳೆ ಇದ್ದಲ್ಲಿ ಅವುಗಳನ್ನು ಪ್ರಜ್ಞಾಪೂರ್ವಕವಾಗಿ ಮನ್ನಾ ಮಾಡಲಾಗಿದೆಯೆಂದು ತಿಳಿದು ಖರೀದಿ ಪ್ರಕ್ರಿಯೆಯನ್ನು ಸಮಾಪ್ತಿಗೊಳಿಸಲಾಗುವುದು.

ಸ್ಥಿರಾಸ್ತಿಯ ವಿವರ: ಮೈಸೂರು ಜಿಲ್ಲೆ, ಹೆಗ್ಗಡದೇವನ ಕೋಟೆ ತಾಲ್ಲೂಕು, ಅಂತರಸಂತೆ ಹೋಬಳಿ, ಎನ್. ಬೇಗೂರು ಗ್ರಾಮದ ಸರ್ವೆ ನಂಬರ್59/2ರಲ್ಲಿನ 1 (ಒಂದು) ಎಕರೆ 29 (ಇಪ್ಪತ್ತೊಂಬತ್ತು) ಗುಂಟೆ ಖುಷ್ಕಿ ಕೃಷಿ ಜಮೀನಿಗೆ ಚೆಕ್ಕುಬಂದಿ

ಪೂರ್ವಕ್ಕೆ : ಸರ್ವೆ ಸಂಖ್ಯೆ 61ರ ಜಮೀನು;
ಪಶ್ಚಿಮಕ್ಕೆ : ಸರಕಾರಿ ರಸ್ತೆ;
ಉತ್ತರಕ್ಕೆ : ಸರ್ವೆ ಸಂಖ್ಯೆ 59/3ರ ಜಮೀನು ಹಾಗೂ
ದಕ್ಷಿಣಕ್ಕೆ: ಸರ್ವೆ ಸಂಖ್ಯೆ 59/1ರ ಜಮೀನು

ಸಹಿ/- ಕು. ನವ್ಯ ಶೆಟ್ಟಿರಾಜು,
Solv. ವಕೀಲರು ಹಾಗೂ ಕಾನೂನು ಸಲಹೆಗಾರರು
ನಂ. 45, 1ನೇ ಮಹಡಿ, 19ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ, ಬಿ.ಟಿ.ಎಂ 2ನೇ ಹಂತ,
ಬೆಂಗಳೂರು 5600076
ದೂರವಾಣಿ: +91 98800 12694
E-mail: info@solvadvocates.in
ಸ್ಥಳ: ಬೆಂಗಳೂರು ದಿನಾಂಕ: 06-05-2026

ಬ್ಯಾಂಕ್ ಆಫ್ ಬರೋಡ ಇಂಡಸ್ಟ್ರಿಯಲ್ ಸಬ್‌ಅರ್ಬ್ ಶಾಖೆ

बैंक ऑफ़ बड़ौदा
Bank of Baroda

ಪ್ರಾದೇಶಿಕ ಕಛೇರಿ, ಬರೋಡಾ ಸೌಧ, ವಿಶ್ವಮಾನವ ಡಬಲ್ ರೋಡ್, ಸರಸ್ವತಿಪುರಂ, ಮೈಸೂರು-09. ದೂರವಾಣಿ: 0821-2571919
ಇ-ಮೇಲ್: recovery.mysuru@bankofbaroda.com, Website: www.bankofbaroda.com

ಸ್ವಾಧೀನ ಸೂಚನೆ (ಸ್ಥಿರಾಸ್ತಿಗಾಗಿ)

ಅಧಿಕೃತ ಅಧಿಕಾರಿಗಳು **ಬ್ಯಾಂಕ್ ಆಫ್ ಬರೋಡ, ಇಂಡಸ್ಟ್ರಿಯಲ್ ಸಬ್‌ಅರ್ಬ್ ಶಾಖೆ,** ಇದರ ಅಧಿಕಾರ ಹೊಂದಿದ ಅಧಿಕೃತ ಅಧಿಕಾರಿಯಾಗಿದ್ದು ಸೆಕ್ಯೂರಿಟೈಜೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟ್ರೆಸ್ಟ್ ಆಕ್ಟ್ 2002 (ಆರ್ಡಿನರ್ 3ರ 2002) ರ ಅನ್ವಯ ಮತ್ತು ಸೆಕ್ಯೂರಿಟಿ ಇಂಟ್ರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳ 2002ರ ನಿಯಮ 9 ಅನ್ನು ಓದಿಕೊಂಡಂತೆ ಪ್ರಕರಣ 13(12)ರ ಅನ್ವಯ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸದರಿ ಸೂಚನೆ ತಲುಪಿದ **ದಿನಾಂಕ: 25.02.2026** ರಿಂದ 60 ದಿನಗಳ ಒಳಗೆ ಸೂಚನೆಯಲ್ಲಿ ತಿಳಿಸಿರುವ ಮೊಬಲಗು **ರೂ.17,49,644.41 (ರೂಪಾಯಿ ಹದಿನೇಳು ಲಕ್ಷದ ನಲವತ್ತೊಂಭತ್ತು ಸಾವಿರದ ಆರುನೂರ ನಲವತ್ತನಾಲ್ಕು ಮತ್ತು ನಲವತ್ತೊಂದು ಪೈಸೆ ಮಾತ್ರ)** ಜೊತೆಗೆ **ದಿನಾಂಕ: 22.02.2026** ರಿಂದ ಮುಂದಿನ ಬಡ್ಡಿ ಮತ್ತು ಇತರೆ ಖರ್ಚು ವೆಚ್ಚಗಳನ್ನು ಪಾವತಿ ಮಾಡಲು **ಸಾಲಗಾರರು/ಅಡಮಾನುದಾರರು/ ಜಾಮೀನುದಾರರು: (1) ಶ್ರೀ ಮೋಹನ್ ಕುಮಾರ್ ಎನ್** ಬಿನ್ ಲೇಟ್ ಶ್ರೀ ನರಸಿಂಹಯ್ಯ **(ಸಾಲಗಾರರು), (2) ಶ್ರೀಮತಿ ಸವಿತಾ ಎನ್** ಕೋಂ ಮೋಹನ್ ಕುಮಾರ್ ಎನ್ **(ಜಾಮೀನುದಾರರು), ಇವರಿಬ್ಬರ ವಿಳಾಸ** : ನಂ.1038/ಎ, 32ನೇ ಕ್ರಾಸ್, 4ನೇ ಮೇನ್, 4ನೇ ಮುಖ್ಯ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು-570008., ಇವರಿಗೆ **ದಿನಾಂಕ : 25.02.2026** ರಂದು ಡಿಮ್ಯಾಂಡ್ ನೋಟಿಸ್‌ನ್ನು ನೀಡಲಾಗಿತ್ತು.

ಸಾಲಗಾರರು ಸದರಿ ಮೊಬಲಗನ್ನು ಮರುಪಾವತಿಸದೇ ಇರುವುದರಿಂದ ಈ ಕೆಳಗೆ ಸಹಿ ಮಾಡಿರುವವರು ಕೆಳಗೆ ವಿವರಿಸಿಲಾದ ಆಸ್ತಿಯನ್ನು ಈ ಮೇಲೆ ತಿಳಿಸಿದ ಕಾಯಿದೆಯ ಕಲಂ 13(4) ರೊಂದಿಗೆ ನಿಯಮ 8 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ **ದಿನಾಂಕ: 06.05.2026** ರಂದು ಸ್ವಾಧೀನ ಪಡಿಸಿಕೊಂಡಿದ್ದಾರೆ ಎಂದು ಸಾಲಗಾರರಿಗೆ ಈ ಮೂಲಕ ತಿಳಿಯಪಡಿಸಿದೆ.

ಸಾಲಗಾರರು ಹಾಗೂ ನಿರ್ದಿಷ್ಟವಾಗಿ ಸಾರ್ವಜನಿಕರು ಈ ಕೆಳಗೆ ವಿವರಿಸಿದ ಆಸ್ತಿಯೊಂದಿಗೆ ವ್ಯವಹರಿಸದಂತೆ ಈ ಮೂಲಕ ಎಚ್ಚರಿಸುತ್ತಿದ್ದೇವೆ ಹಾಗೂ ಅಂತಹ ಯಾವುದೇ ವ್ಯವಹಾರಗಳು **ಬ್ಯಾಂಕ್ ಆಫ್ ಬರೋಡ** ಇವರಿಗೆ ಸಂದಾಯವಾಗತಕ್ಕ ಮೊಬಲಗು **ರೂ. 17,16,417.77 (ರೂಪಾಯಿ ಹದಿನೇಳು ಲಕ್ಷದ ಹದಿನಾರು ಸಾವಿರದ ನಾಲ್ಕುನೂರ ಹದಿನೇಳು ಮತ್ತು ಎಪ್ಪತ್ತೇಳು ಪೈಸೆ ಮಾತ್ರ) ದಿನಾಂಕ: 26.04.2026** ರಿಂದ ಬಡ್ಡಿ ಹಾಗೂ ಇತರೆ ವೆಚ್ಚಗಳು.

ಸಾಲಗಾರರ ಗಮನಕ್ಕೆ ತರುವುದೇನೆಂದರೆ ಭದ್ರತಾ ಸ್ವತ್ತುಗಳನ್ನು ಹಿಂಪಡೆಯುವ ಕಾಲಾವಕಾಶ ಕಾಯಿದೆಯ ಸೆಕ್ಷನ್ 13(8)ರ ಅನ್ವಯ ಇರುತ್ತದೆ.

ಸ್ಥಿರಾಸ್ತಿಯ ವಿವರ:

ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಮನೆಯ ಆಸ್ತಿ ನಂ.1038/ಎ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 25 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ, ಈ ಆಸ್ತಿಯು 32ನೇ ಕ್ರಾಸ್, 4ನೇ ಮೇನ್, ವಿದ್ಯಾರಣ್ಯಪುರಂ, ಫೋರ್ಟ್ ಮೊಹಲ್ಲಾ, ಮೈಸೂರು-570008ರಲ್ಲಿದ್ದು, ಶ್ರೀ ಮೋಹನ್ ಕುಮಾರ್ ಎನ್ ಬಿನ್ ಲೇಟ್ ನರಸಿಂಹಯ್ಯರವರ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿ ನಂ.1039, ಪಶ್ಚಿಮಕ್ಕೆ: ಆಸ್ತಿ ನಂ.1037, ಉತ್ತರಕ್ಕೆ: ರಸ್ತೆ, ದಕ್ಷಿಣಕ್ಕೆ: ಆಸ್ತಿ ನಂ.1055.

ದಿನಾಂಕ : 06.05.2026
ಸ್ಥಳ : ಮೈಸೂರು

ಸಹಿ/- ಅಧಿಕೃತ ಅಧಿಕಾರಿ
ಬ್ಯಾಂಕ್ ಆಫ್ ಬರೋಡ

ಸುದ್ದಿ ಸಿಂಚನ

ಮೃಗಾಲಯದಲ್ಲಿ ಹಕ್ಕಿಜ್ವರ ತಡೆಗೆ ಮುನ್ನೆಚ್ಚರಿಕೆ ಕ್ರಮ

ಮೈಸೂರು: ದೇಶದ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾದ ಮೈಸೂರಿನ ಶ್ರೀ ಚಾಮರಾಜೇಂದ್ರ ಮೃಗಾಲಯದಲ್ಲಿ ಹಕ್ಕಿಜ್ವರ ಸಾಂಕ್ರಾಮಿಕ ರೋಗ ಹರಡದಂತೆ ತಡೆಗಟ್ಟಲು ಆಡಳಿತ ಮಂಡಳಿಯು ಸಮಗ್ರ ಮುಂಜಾಗ್ರತಾ ಕ್ರಮ ಕೈಗೊಂಡಿದೆ. ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕಿ ಪಿ.ಅನುಷ ಈ ಕುರಿತು ಅಧಿಕೃತ ಆದೇಶ ಹೊರಡಿಸಿದ್ದು, ಮೃಗಾಲಯ ಮಾತ್ರವಲ್ಲದೆ ಕಾರಂಜಿ ಕೆರೆ ಪ್ರಕೃತಿ ಉದ್ಯಾನವನ ಮತ್ತು ಕೂರ್ಗಳ್ಳಿಯ ವನ್ಯಪ್ರಾಣಿ ಸಂರಕ್ಷಣಾ ಕೇಂದ್ರದಲ್ಲೂ ಹೈ- ಅಲರ್ಟ್ ಘೋಷಿಸಿದ್ದಾರೆ. ಮೃಗಾಲಯದ ಪ್ರವೇಶ ದ್ವಾರಗಳಲ್ಲಿ (ಗೇಟ್-2) ಸೋಂಕು ನಿವಾರಕ ದ್ರವದ ಪಥವನ್ನು ನಿರ್ಮಿಸಲಾಗಿದೆ. ಸಿಬ್ಬಂದಿ, ಅಧಿಕಾರಿಗಳು ಮತ್ತು ಪ್ರವಾಸಿಗರ ವಾಹನಗಳು ಈ ಮಾರ್ಗದ ಮೂಲಕವೇ ಹಾದು ಹೋಗುವುದನ್ನು ಕಡ್ಡಾಯಗೊಳಿಸಲಾಗಿದೆ. ಪ್ರತಿಯೊಂದು ಪ್ರಾಣಿ ಹಾಗೂ ಪಕ್ಷಿಗಳ ಆವರಣದ ಮುಂದೆ 'ಫುಟ್ ಡಿಪ್'ವ್ಯವಸ್ಥೆ ಮಾಡಲಾಗಿದ್ದು, ಸಿಬ್ಬಂದಿ ಮತ್ತು ಸಂದರ್ಶಕರು ಇದನ್ನು ಕಡ್ಡಾಯವಾಗಿ ಬಳಸುವಂತೆ ಸೂಚಿಸಲಾಗಿದೆ. ಪ್ರಾಣಿಗಳ ತ್ಯಾಜ್ಯ ನಿರ್ವಹಣೆ ಮಾಡುವವರು ಕೆಲಸದ ಮೊದಲು ಮತ್ತು ನಂತರ ಹ್ಯಾಂಡ್ ಸ್ಯಾನಿಟೈಸರ್ ಬಳಸುವುದು ಕಡ್ಡಾಯ. ವಲಸೆ ಹಕ್ಕಿಗಳ ಮೇಲೆ ನಿಗಾ ಇಡಲು ಸೂಚಿಸಲಾಗಿದ್ದು, ಕಾರಂಜಿ ಕೆರೆ ವ್ಯಾಪ್ತಿ ಯಲ್ಲಿ ಹಕ್ಕಿಗಳ ಅಸಹಜ ಸಾವು ಕಂಡುಬಂದಲ್ಲಿ ತಕ್ಷಣವೇ ಮಾಹಿತಿ ನೀಡಲು ಸಿಬ್ಬಂದಿಗೆ ಆದೇಶಿ ಸಲಾಗಿದೆ. ಪಕ್ಷಿಗಳ ಮಲದ ಮಾದರಿಗಳನ್ನು ಸಂಗ್ರಹಿಸಿ ರೋಗ ನಿರ್ಣಯ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ಕಳುಹಿಸಲಾಗುತ್ತಿದೆ. ಪ್ರಾಣಿಗಳಿಗೆ ನೀಡುವ ಕೋಳಿ ಮಾಂಸದ ಮೇಲೆ ವಿಶೇಷ ನಿಗಾ ವಹಿಸಲಾಗಿದೆ. ಜೀವಂತ ಕೋಳಿಗಳನ್ನು ಪಶುವೈದ್ಯರು ತಪಾಸಣೆ ಮಾಡಿದ ನಂತರವೇ ವಧಿಸಲಾಗುತ್ತದೆ. ಮಾಂಸವನ್ನು ಪೊಟ್ಯಾಸಿಯಮ್ ಪರ್ಮಾಂಗನೇಟ್ ದ್ರಾವಣ ಮತ್ತು ಬಿಸಿನೀರಿನಿಂದ ತೊಳೆದು, ಯುವಿ ಸ್ಟೆರಿಲೈಸೇಶನ್ ಮಾಡಿದ ನಂತರವಷ್ಟೇ ಆಹಾರವಾಗಿ ನೀಡಲಾಗುತ್ತಿದೆ. ಯಾವುದೇ ತುರ್ತು ಪರಿಸ್ಥಿತಿಯನ್ನು ಎದುರಿಸಲು ಪಶುವೈದ್ಯರು, ಲ್ಯಾಬ್ ತಂತ್ರಜ್ಞರು ಮತ್ತು ನಾಲ್ವರು ಪಾಲಕರನ್ನೊಳಗೊಂಡ ವಿಶೇಷ ತಂಡವನ್ನು ರಚಿಸಲಾಗಿದೆ. ಮೈಸೂರು ಭಾಗದಲ್ಲಿ ಹಕ್ಕಿಜ್ವರದ ಭೀತಿ ಎದುರಾದಲ್ಲಿ, ಮುನ್ನೆಚ್ಚರಿಕಾ ಕ್ರಮವಾಗಿ ಜೀವಂತ ಕೋಳಿಗಳ ಬದಲಿಗೆ ಪ್ರತಿಷ್ಠಿತ ಸಂಸ್ಥೆಗಳಿಂದ ನೇರವಾಗಿ ಸಂಸ್ಕರಿಸಿದ ಮಾಂಸವನ್ನು ಖರೀದಿಸಲು ಮೃಗಾಲಯ ನಿರ್ಧರಿಸಿದೆ. ರೋಗದ ತೀವ್ರತೆ ಹೆಚ್ಚಾದಲ್ಲಿ ಸಿಬ್ಬಂದಿ ಅಂತರ-ವಿಭಾಗದ ಸಂಚಾರವನ್ನು ನಿಷೇಧಿಸಲಾಗು ವುದು ಎಂದು ತಿಳಿಸಿದ್ದಾರೆ.

ಪರಸ್ಪರ ಸಂಸ್ಥೆಯ ಬೇಸಿಗೆ ಶಿಬಿರದ ಸಮಾರೋಪ



ಮೈಸೂರು: ಸಾಮಾಜಿಕ ಜಾಲತಾಣಗಳು ಎಲ್ಲಾ ಸ್ತರಗಳನ್ನು ಆವರಿಸಿಕೊಂಡಿರುವ ಈ ಕಾಲಘಟ್ಟದಲ್ಲಿ ವಿದ್ಯಾರ್ಥಿಗಳು ಅದಕ್ಕೆ ಹೆಚ್ಚು ಅಂಟಿಕೊಳ್ಳದೆ ಸೃಜಶೀಲತೆಯನ್ನು ಬೆಳೆಸಿಕೊಂಡು ಕಲಾತ್ಮಕ ಮತ್ತು ಶೈಕ್ಷಣಿಕ ಜೀವನವನ್ನು ವೃದ್ಧಿಸಿಕೊಳ್ಳಬೇಕು ಎಂದು ದಸಂಸ ಮುಖಂಡ ಆಹಿಂದ ಜವರಪ್ಪ ಹೇಳಿದರು. ಪರಸ್ಪರ ಸಂಸ್ಥೆಯು ಶಾಶ್ವತ ಸೇವಾ ಶಾಲೆ ಸಹಯೋಗ ದಲ್ಲಿ ನಡೆಸುವ ಮೂರನೇ ವರ್ಷದ ಚಿಣ್ಣರ ಚೈತ್ರ ಮಕ್ಕಳ ಬೇಸಿಗೆ ಶಿಬಿವದ ಸಮಾರೋಪ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಶಿಬಿರಗಳು ಮಕ್ಕಳಲ್ಲಿ ಅಡಗಿರುವ ಸುಪ್ತಕಲೆಯನ್ನು ಹೊರತರುವ ವೇದಿಕೆಯಾಗಲಿವೆ. ಉದಯೋನ್ಮುಖ ಪ್ರತಿಭೆ ರಮೇಶ್ ತಾಯೂರು ಅವರ ನೇತೃತ್ವದಲ್ಲಿ ನಡೆಯುತ್ತಿರುವ ಈ ಶಿಬಿರವು ಅತ್ಯಂತ ಕ್ರಿಯಾಶೀಲವಾಗಿ ಮೂಡಿಬಂದಿದೆ ಎಂದು ಅಭಿಪ್ರಾಯಪಟ್ಟರು. ರಂಗಭೂಮಿ ಮತ್ತು ಚಲನಚಿತ್ರ ಯುವ ನಟ ಅಂಕಿತ್ ರಾಜ್ ಮಾತನಾಡಿ, ಮಕ್ಕಳು ರಂಗಭೂಮಿ ಮತ್ತು ಸಾಂಸ್ಕೃತಿಕ, ಸಾಮಾಜಿಕ ಜಗತ್ತಿನಲ್ಲಿ ಉತ್ತಮ ಆಲೋಚನೆಗಳಿಂದ ಅತ್ಯುತ್ತಮ ಕಾರ್ಯಗಳಲ್ಲಿ ತೊಡಗಿ ಸನ್ಮಾರ್ಗದಲ್ಲಿ ಸಾಗಬೇಕು ಎಂದು ತಿಳಿಸಿದರು. ನಿವೃತ್ತ ಪ್ರಾಂಶುಪಾಲ ಸಿ. ಕುಮಾರ ಸ್ವಾಮಿ, ಮುಖ್ಯಶಿಕ್ಷಕಿ ಎಚ್.ಪಿ. ಪವಿತ್ರಾ, ತಾನ್ಯ ಚೌಧರಿ, ಪರಸ್ಪರ ಸಂಸ್ಥೆಯ ಸಂಸ್ಥಾಪಕ ರಮೇಶ್ ತಾಯೂರು, ಮದನ್ ತೊರೆಮಾವು, ಬೋಧಕ ಬೋಧ ಕೇತರ ಸಿಬ್ಬಂದಿ ಹಾಗೂ ಮಕ್ಕಳು ಇದ್ದರು. ಜನ ಪದ ಗಾಯಕ ವಿಶ್ವನಾಥ್ ಚಂಗಚಹಳ್ಳಿ ಮತ್ತು ಶಿವಕುಮಾರ್‌ತಂಡದ ವತಿಯಿಂದ ಗೀತಗಾಯನ ನಡೆಯಿತು. ಶಿಬಿರದ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು. ಸಂಶೋಧಕ ಅಭಿಷೇಕ್ ಪಾಳ್ಯಗಾರ್ ಕಾರ್ಯಕ್ರಮ ನಿರೂಪಿಸಿದರು.

ಸಂಪತ್ತು, ಆಡಳಿತ ಸಮಾನ ಹಂಚಿಕೆಯಾಗಲಿ

ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ | ಸಾಮಾಜಿಕ ನ್ಯಾಯಕ್ಕೆ ನಮ್ಮ ಸರ್ಕಾರ ಬದ್ಧವೆಂದು ಹೇಳಿಕೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಂಪತ್ತು ಮತ್ತು ಆಡಳಿತ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ಸಾಮಾಜಿಕ ನ್ಯಾಯಕ್ಕೆ ನಮ್ಮ ಸರ್ಕಾರ ಬದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರ ಪಾಲಿಕೆ ಹಾಗೂ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತ್ಯುತ್ಸವ ಸಮಿತಿ ವತಿಯಿಂದ ಕಲಾಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ಜಯಂತಿ ಉದ್ಘಾಟಿಸಿ ಅವರು ಮಾತನಾಡಿ, ಎಲ್ಲಿಯವರೆಗೆ ಸಮ ಸಮಾಜ ನಿರ್ಮಾಣವಾಗುವುದಿಲ್ಲವೋ, ಅಲ್ಲಿಯವರೆಗೆ ತಳ ಹಂತದಲ್ಲಿರುವ ಸಮುದಾಯದಿಂದ ಬೇಡಿಕೆಗಳು ಇದ್ದೇ ಇರುತ್ತವೆ. ಈ ನಾಡಿನ ಸಂಪತ್ತು ಮತ್ತು ಆಡಳಿತ ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು ಎಂಬುದು ನಮ್ಮ ಸರ್ಕಾರದ ಉದ್ದೇಶವಾಗಿದೆ. ಎಲ್ಲರಿಗೂ ಸಮಪಾಲು, ಸಮಬಾಳು ಸಿಗಬೇಕು ಎಂಬುದು ನಮ್ಮ ಆಶಯ ಎಂದು ಹೇಳಿದರು.

ಎಲ್ಲಾ ಸಾಮಾಜಿಕ ಹೋರಾಟಗಾರರ ಕನಸು ಒಂದೇ ಆಗಿದೆ; ಸಮಾಜದಲ್ಲಿ ವೈಜ್ಞಾನಿಕತೆ ಹಾಗೂ ವೈಚಾರಿಕತೆ ಬೆಳೆದು ವರ್ಗ ವ್ಯವಸ್ಥೆಗಳು ನಿರ್ಮೂಲನವಾಗಬೇಕು ಎಂಬುದು ಅವರ ಗುರಿ. ಆದರೂ ಸಹ, ಇಂದಿಗೂ ನಮ್ಮ ದೇಶದಲ್ಲಿ ಜಾತಿ ವ್ಯವಸ್ಥೆಯು ಅಸ್ತಿತ್ವದಲ್ಲಿರುವುದನ್ನು ನಾವು ಕಾಣಬಹುದಾಗಿದೆ ಎಂದರು.

ಅವಕಾಶವಂಚಿತರಾದಎಲ್ಲಾಜನಾಂಗದವರಿಗೂ ಸಮಾನ ಅವಕಾಶಗಳು ಸಿಗಬೇಕು ಎಂಬುದು ನಮ್ಮ ಸಂಕಲ್ಪ. ಡಾ.ಬಿ.ಆರ್. ಅಂಬೇಡ್ಕರ್‌ಅವರು ಹೇಳುವಂತೆ, ಸಮಾಜದಲ್ಲಿ ಜಾತಿ ವ್ಯವಸ್ಥೆಯನ್ನು ಹೋಗಲಾಡಿಸಲು ಎಲ್ಲರಿಗೂ ರಾಜಕೀಯ ಸ್ವಾತಂತ್ರ್ಯ ಸಿಗಬೇಕು. ಈನಿಟ್ಟಿನಲ್ಲಿಪ್ರತಿಯೊಬ್ಬರಿಗೂ ಶಿಕ್ಷಣಲಭಿಸಿದಾಗಮಾತ್ರ ಅವರುರಾಜಕೀಯವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರಿಯಲು ಸಾಧ್ಯ ಎಂದು ಅವರು ತಿಳಿಸಿದರು.

ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿದ ಡಾ.ಬಿ.ಆರ್. ಅಂಬೇಡ್ಕರ್‌ಅವರ ಹೆಸರು ಇಂದು ಜೈ ಭೀಮ್ ಎಂಬ ಘೋಷಣೆಯ ಮೂಲಕ ಎಲ್ಲೆಡೆ ಮೊಳಗುತ್ತಿದೆ. ನಮ್ಮ ರಾಜ್ಯದ 7 ಕೋಟಿ ಜನರಿಗೂ ಅನ್ವಯವಾಗುವಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ಇದರಲ್ಲಿ ಯಾವುದೇ ತಾರತಮ್ಯವಿಲ್ಲ; ನಾವು ಸಾಮಾಜಿಕ ನ್ಯಾಯಕ್ಕೆ ಬದ್ಧವಾಗಿದ್ದೇವೆ ಎಂದು ಅವರು ಪುನರುಚ್ಚರಿಸಿದರು.



ಮೈಸೂರಿನ ಕಲಾಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ಶ್ರೀ ಸಿದ್ಧರಾಮೇಶ್ವರ ಜಯಂತಿ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು. ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮೀಜಿ, ಸಚಿವರಾದ ಶಿವರಾಜ ತಂಗಡಗಿ, ಕೆ. ವೆಂಕಟೇಶ್, ಶಾಸಕರಾದ ಕೆ. ಹರೀಶ್‌ಗೌಡ, ಡಾ.ಡಿ. ತಿಮ್ಮಯ್ಯ ಮೊದಲಾದವರು ಇದ್ದಾರೆ.

ಸಂವಿಧಾನಜಾರಿಗೆಬರುವಮುನ್ನಮನುಶಾಸ್ತ್ರವೇ ಮಾರ್ಗದರ್ಶಿಯೆಂದು ಭಾವಿಸಲಾಗಿತ್ತು. ಆದರೆ ಇಂದು ನಾವು ಸಂವಿಧಾನದ ಆಶಯಗಳಿಗೆ ಬದ್ಧವಾಗಿ ಆಡಳಿತ ನಡೆಸುತ್ತಿದ್ದೇವೆ. ಮನುಷ್ಯನು ಮನುಷ್ಯನನ್ನು ಪ್ರೀತಿಸಬೇಕೇ ಹೊರತು ದ್ವೇಷಿಸಬಾರದು ಎಂಬುದನ್ನು ಅಂಬೇಡ್ಕರ್ ಅವರು ನಮಗೆ ತಿಳಿಸಿಕೊಟ್ಟಿದ್ದಾರೆ ಎಂದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ ಮಾತನಾಡಿ, ಭೋವಿ ಸಮಾಜದ ಕಟ್ಟಕಡೆಯ ಮನುಷ್ಯನಿಗೆ ಇಂದು ಸರ್ಕಾರದಿಂದ ಸೌಲಭ್ಯಗಳು ತಲುಪುತ್ತಿವೆ ಎಂದರೆ ಅದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಶೀರ್ವಾದವೇ ಕಾರಣ ಎಂದರು.

ಸಿದ್ದರಾಮೇಶ್ವರ ಜಯಂತಿಯನ್ನು ಮೊದಲು ಬೆಂಗಳೂರಿನಲ್ಲಿಆಯೋಜಿಸಲುನಿರ್ಧರಿಸಲಾಗಿತ್ತು. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಮ್ಮುಖದಲ್ಲೇ ಸಮಾಜದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕು ಎಂಬ ಉದ್ದೇಶದಿಂದ ಕಾರ್ಯಕ್ರಮವನ್ನು ಮೈಸೂರಿಗೆ ಸ್ಥಳಾಂತರಿಸಲಾಯಿತು ಎಂದು ತಿಳಿಸಿದರು.

ಭೋವಿ ಹಾಗೂ ಒಡ್ಡರ ಸಮುದಾಯದವರು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ನಾನುಸಚಿವನಾಗಿ ಇಂದು ಈ ಮಟ್ಟಕ್ಕೆ ಬರಲು ತಮ್ಮ ಪೋಷಕರು ನೀಡಿದ ಶಿಕ್ಷಣವೇ ಕಾರಣ. ಸಮಾಜದ ಯುವಕರು ಶಿಕ್ಷಿತರಾಗಬೇಕುಮುಖ್ಯಮಂತ್ರಿ ಸಿದ್ದರಾಮಯ್ಯನವರು ಜಾರಿಗೆ ತಂದ ಅನ್ನಭಾಗ್ಯ ಯೋಜನೆಯಿಂದಸಮಾಜದಬಡವರುಹಸಿವಿನಿಂದ ಮುಕ್ತರಾಗಿದ್ದಾರೆ ಎಂದು ಹೇಳಿದರು.

ಭೋವಿ ಅಭಿವೃದ್ಧಿ ನಿಗಮದಲ್ಲಿ ಒಡ್ಡರ ಸಮುದಾಯವನ್ನು ಸೇರ್ಪಡೆ ಮಾಡಿ ಭೋವಿ ಹಾಗೂ ಒಡ್ಡರ ಅಭಿವೃದ್ಧಿ ನಿಗಮ ಎಂದು ಮಾರ್ಪಡು ಮಾಡಬೇಕು. ರಾಜ್ಯದ ಪ್ರತಿ ಜಿಲ್ಲೆಯಲ್ಲೂ ಸಿದ್ದರಾಮೇಶ್ವರ ಸಮುದಾಯ ಭವನ ನಿರ್ಮಿಸಬೇಕು ಎಂದು ಅವರು ಮನವಿ ಮಾಡಿದರು.

ಸಮಾಜದಲ್ಲಿ ಹಿಂದೆ ಸಂಘಟನೆಯ ಕೊರತೆ ಇತ್ತು. ಆದರೆ ಇಂದು ಎಲ್ಲಾ ಜಿಲ್ಲೆಗಳಲ್ಲೂ ಸಮಾಜ ಸಂಘಟಿತವಾಗುತ್ತಿರುವುದು ಸಂತಸದ ವಿಷಯ. ಇದೇ ಮೊದಲ ಬಾರಿಗೆ ರಾಜ್ಯ ಮಟ್ಟದಲ್ಲಿ ಸಿದ್ದರಾಮೇಶ್ವರ ಪ್ರಶಸ್ತಿಯನ್ನು ಆರಂಭಿಸಲಾಗಿದ್ದು, ಈ ವರ್ಷ ಹಿರಿಯ ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಅವರಿಗೆ ನೀಡಿರುವುದು ಪ್ರಶಸ್ತಿಗೆ ಗೌರವ ತಂದಿದೆ ಎಂದರು.

ಚಿತ್ರದುರ್ಗ ಹಾಗೂ ಬಾಗಲಕೋಟೆ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅವರು ಮಾತನಾಡಿ, ಶ್ರೀ ಶಿವಯೋಗಿ ಸಿದ್ದರಾಮೇಶ್ವರರು ಕೇವಲ ಒಬ್ಬ ಶರಣರಲ್ಲ, ಅವರು ಈ ನಾಡಿನ ಕಾಯಕ ಯೋಗಿ. ಅವರ ತತ್ವಗಳು ಮತ್ತು ಸಮಾಜಮುಖಿ ಕಾರ್ಯಗಳು ಇಂದಿನ ಸಮಾಜಕ್ಕೆ ಅತ್ಯಂತ ಅವಶ್ಯಕವಾಗಿವೆ. ಸಮಾಜದ ಅಭಿವೃದ್ಧಿಗೆ ಮತ್ತು ಸಂಘಟನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೊಡುಗೆ ಅಪಾರ. ಸಮಾಜದ ಕಟ್ಟಕಡೆಯ ವ್ಯಕ್ತಿಯ ಧ್ವನಿಯಾಗಿ ಅವರು ಕೆಲಸ ಮಾಡುತ್ತಿದ್ದಾರೆ ಎಂದರು.

ಈ ವೇಳೆ ಸಿದ್ದರಾಮೇಶ್ವರ ಪ್ರಶಸ್ತಿ ಪಡೆದ ಹಿರಿಯ ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಅವರ ಬಗ್ಗೆ ಮಾತನಾಡಿದ ಶ್ರೀಗಳು, ಅವರ ಸಾಹಿತ್ಯ ಸೇವೆ ಮತ್ತು ಸಮಾಜದ ಮೇಲಿರುವ ಅವರ ಕಾಳಜಿ ನಮಗೆಲ್ಲರಿಗೂ ಪ್ರೇರಣೆ. ಅಂತಹ ವ್ಯಕ್ತಿಗೆ ಪ್ರಶಸ್ತಿ ನೀಡಿರುವುದು ಅತ್ಯಂತ ಸಂತಸ ಇದೆ ಎಂದು ಹೇಳಿದರು.

ಸಿದ್ದರಾಮೇಶ್ವರರ ಬಗ್ಗೆ ಇರುವ ಪವಾಡದ ಕಥೆಗಳಿಗಿಂತ ಅವರ ವ್ಯಕ್ತಿತ್ವದ ಆಳ ಮತ್ತು ಕಾಯಕ ನಿಷ್ಠೆ ಹೆಚ್ಚು ಮುಖ್ಯವಾದುದು. ಸಮಾಜಕ್ಕಾಗಿ ಕೆರೆ-ಕಟ್ಟೆಗಳನ್ನು ನಿರ್ಮಿಸಿದ ಅವರ ದೂರದೃಷ್ಟಿ ಇಂದಿನ ಜನಪ್ರತಿನಿಧಿಗಳಿಗೆ ಮಾದರಿಯಾಗಬೇಕು ಎಂದು ತಿಳಿಸಿದರು.

ಕಾಯಕ ಯೋಗಿಗಳಾಗಿ

ಜೀವನದಲ್ಲಿ ಕಾಯಕ ಮಾಡಿ ಹಣಸಂಪಾದಿಸಬೇಕು ಮತ್ತು ಆ ಸಂಪಾದನೆಯನ್ನು ಎಲ್ಲರೊಂದಿಗೆ ಸಮಾನವಾಗಿ ಹಂಚಿಕೊಳ್ಳಬೇಕು ಎಂಬ ತತ್ವವನ್ನು ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರು ನಮಗೆ ಬೋಧಿಸಿದ್ದಾರೆ. ಆ ಬೋಧನೆಯನ್ನು ನಾವು ಅಕ್ಷರಶಃ ಪಾಲಿಸಲು ಪ್ರಯತ್ನಿಸೋಣ. ಅವರು ಕಾಯಕಯೋಗಿಯಾಗಿದ್ದು, ಕಾಯಕವೇ ಕೈಲಾಸ ಎಂದು ನಂಬಿ ನಿರಂತರವಾಗಿ ಕರ್ಮಪಥದಲ್ಲಿ ತೊಡಗಿಸಿಕೊಂಡಿದ್ದರು. ಆದ್ದರಿಂದ ಪ್ರತಿಯೊಬ್ಬರೂ ಉತ್ಪಾದನಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ಕಾಯಕಯೋಗಿಗಳಾಗಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಭೋವಿ ಸಮಾಜದ ಬಂಧುಗಳು ತಮ್ಮ ಹಕ್ಕುಗಳಿಗಾಗಿ ಸಂಘಟಿತರಾಗಬೇಕು. ರಾಜಕೀಯ ಮತ್ತು ಶೈಕ್ಷಣಿಕವಾಗಿ ಮುನ್ನಡೆಯಲು ಒಗ್ಗಟ್ಟು ಪ್ರದರ್ಶಿಸುವುದು ಅನಿವಾರ್ಯ ಎಂದು ತಿಳಿಸಿದರು.

ಡಾ.ಬಿ.ಆರ್. ಅಂಬೇಡ್ಕರ್‌ಅವರನ್ನು ಕೇವಲ ದಲಿತ ನಾಯಕ ಎಂದು ಸೀಮಿತಗೊಳಿಸುವುದು ತಪ್ಪು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಿಸಿರುವ ಅವರ ಬರಹಗಳನ್ನು ಓದಿದಾಗ ಅಂಬೇಡ್ಕರ್ ಅವರು ಇಡೀ ಭಾರತದ ಮತ್ತು ಭಾರತೀಯರ ನಾಯಕ ಎಂಬುದು ಅರ್ಥವಾಗುತ್ತದೆ ಎಂದು ಹೇಳಿದರು.

ರಾಜ್ಯದಲ್ಲಿ 7 ಕೋಟಿ ಜನಸಂಖ್ಯೆ ಇದ್ದು, ಕೇವಲ ಶೇ. 1ರಷ್ಟು ಜನರಿಗೆ ಮಾತ್ರ ಸರ್ಕಾರಿ ಉದ್ಯೋಗ ನೀಡಲು ಸಾಧ್ಯ. ಆದ್ದರಿಂದ ಯುವಕರು ಕೇವಲ ಸರ್ಕಾರಿ ನೌಕರಿಯನ್ನು ನೆಚ್ಚಿಕೊಳ್ಳದೆ, ಸ್ವಯಂ ಉದ್ಯೋಗಗಳನ್ನು ಅಪ್ಪಿಕೊಳ್ಳಬೇಕು ಎಂದು ಹೇಳಿದರು.

ಈ ವೇಳೆ 2025-26 ನೇ ಸಾಲಿನ ಕಾಯಕ ಯೋಗಿ ಸಿದ್ದರಾಮೇಶ್ವರ ಪ್ರಶಸ್ತಿಯನ್ನು ಚಿಂತಕ ತುಮಕೂರು ಜಿಲ್ಲೆಯ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಅವರಿಗೆ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಸಿದ್ದರಾಮ ಬೆಳ್ಳಿಕಿರಣ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಸಚಿವ ಕೆ. ವೆಂಕಟೇಶ್, ಶಾಸಕ ಕೆ. ಹರೀಶ್ ಗೌಡ, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಶಾಸಕ ಡಾ.ಡಿ. ತಿಮ್ಮಯ್ಯ, ಡಾ. ಯತೀಂದ್ರ ಸಿದ್ದರಾಮಯ್ಯ, ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ, ಕನ್ನಡ ಪುಸ್ತಕ ಪ್ರಾಧಿಕರದ ಅಧ್ಯಕ್ಷ ಮಾನಸ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಆಯುಬ್ ಖಾನ್, ಮೈಲ್ಯಾಕ್‌ಅಧ್ಯಕ್ಷ ಎಚ್.ಡಿ. ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಸ್. ರಂಗಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ. ಮಂಜುನಾಥ್, ನಿರ್ದೇಶಕ ಮಂಜುನಾಥ್ ಸ್ವಾಮಿ, ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಜಿಲ್ಲಾಧಿಕಾರಿ ಜಿ. ಲಕ್ಷ್ಮಿಕಾಂತ ರೆಡ್ಡಿ, ಎಡಿಸಿ ಐಶ್ವರ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಸುದರ್ಶನ್‌ಮೊದಲಾದವರು ಇದ್ದರು.

ಅಧ್ಯಯನದ ಹವ್ಯಾಸ ರೂಢಿಸಿಕೊಳುವುದು ಅಗತ್ಯ

ಯುವಪೀಳಿಗೆಗೆ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಸಲಹೆ | ವಿಶ್ವ ಪುಸ್ತಕ ದಿನಾಚರಣೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಯುವಪೀಳಿಗೆ ಗ್ರಂಥಾಲಯಕ್ಕೆ ಹೋಗುವ ಮತ್ತು ಪುಸ್ತಕಗಳನ್ನು ಓದುವಂತಹ ಹವ್ಯಾಸವನ್ನು ರೂಢಿಸಿಕೊಳ್ಳಬೇಕು ಎಂದು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಕರೆ ನೀಡಿದರು.

ನಗರದ ನಜರ್‌ಬಾದ್ ಪೀಪಲ್ಸ್ ಪಾರ್ಕ್ ನಲ್ಲಿರುವ ನಗರ ಕೇಂದ್ರ ಗ್ರಂಥಾಲಯ ಹಾಗೂ ಬಾಲ್ಯ ಫೌಂಡೇಶನ್ ಗುರುವಾರ ಆಯೋಜಿಸಿದ್ದ ವಿಶ್ವ ಪುಸ್ತಕ ಹಾಗೂ ಕೃತಿ ಸ್ವಾಮ್ಯ ದಿನಾಚರಣೆ, ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಅವರು ಉದ್ಘಾಟಿಸಿ ಮಾತನಾಡಿದರು.

ಪುಸ್ತಕಗಳನ್ನು ಓದುವ ಮೂಲಕ ತಮ್ಮ ಜ್ಞಾನಾರ್ಜನೆ ಹೆಚ್ಚಿಸಿಕೊಳ್ಳಬೇಕು. ದೇಶ ಸುತ್ತಬೇಕು- ಕೋಶ ಓದಬೇಕು ಎಂಬ ಹಿರಿಯರ ಮಾತಿನಂತೆ ದಿನನಿತ್ಯವು ಪುಸ್ತಕಗಳನ್ನು ಓದುವ ಹವ್ಯಾಸ ರೂಢಿಸಿಕೊಳ್ಳಬೇಕು ಎಂದರು.

ನಗರ ಕೇಂದ್ರ ಗ್ರಂಥಾಲಯ ಉಪ ನಿರ್ದೇಶಕ ಬಿ. ಮಂಜುನಾಥ್ ಮಾತನಾಡಿ, ಸಾರ್ವಜನಿಕರು ಗ್ರಂಥಾಲಯದ ಸದುಪಯೋಗ ಪಡೆದುಕೊಂಡು ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು ಎಂದು ಹೇಳಿದರು. ಇದೇ ವೇಳೆ ಮಣಿಪಾಲ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರಾದ ಡಾ.ಕೆ.ಜಿ. ಅಮೂಲ್ಯ ಅವರು, ಗ್ರಂಥಾಲಯದ ಮಹಿಳಾ ಸಿಬ್ಬಂದಿ ಹಾಗೂ ಸಾರ್ವಜನಿಕ ಮಹಿಳಾ ಓದುಗರಿಗೆ ಋತುಚಕ್ರ ಹಾಗೂ ಮಹಿಳೆಯರಿಗೆ ಸಂಬಂಧಿಸಿದ ಕ್ಯಾನ್ಸರ್‌ಕಾಯಿಲೆ ಕುರಿತು ವಿಶೇಷ ಉಪನ್ಯಾಸ ನೀಡಿದರು.



ಮಣಿಪಾಲ್ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದೊಂದಿಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ, ಡಾ. ಅಗರ್ ವಾಲ್ಸ್ ನೇತ್ರಾಲಯ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಆಯೋಜಿಸಲಾಗಿತ್ತು.

ಬಳಿಕ ಗ್ರಂಥಾಲಯದ ಉಪಯೋಗ ಪಡೆದು ವಿವಿಧ ಸರ್ಕಾರಿ ಇಲಾಖೆಗಳಲ್ಲಿ ನೇಮಕಗೊಂಡು ಕರ್ತವ್ಯ ನಿರ್ವಹಿಸುತ್ತಿರುವ 27 ಗ್ರಂಥಾಲಯದ ಓದುಗರನ್ನು ಗೌರವಿಸಲಾಯಿತು. ಬಾಲ್ಯ ಫೌಂಡೇಶನ್ ಸಹಯೋಗದೊಂದಿಗೆ ನೋಟ್ ಪುಸ್ತಕಗಳಲ್ಲಿ ಬಳಕೆಯಾಗದ ಹಾಳೆಗಳ ಸಂಗ್ರಹಣೆ ಹಾಗೂ ಅವುಗಳನ್ನು ಪುನರ್ ಬಳಕೆ ಮಾಡುವ ಅಭಿಯಾನಕ್ಕೆ ಅಧಿಕೃತವಾಗಿ ಚಾಲನೆ ನೀಡಲಾಯಿತು.

ಉತ್ತಮ ಸೇವೆಗಾಗಿ ಗ್ರಂಥಾಲಯಗಳಲ್ಲಿ ಗೌರವ ಸಂಭಾವನೆಆಧಾರದಮೇಲೆಕಾರ್ಯನಿರ್ವಹಿಸುತ್ತಿರುವ 5 ತಾತ್ಕಾಲಿಕ ಕೆಲಸಗಾರರನ್ನು ಅಭಿನಂದಿಸಲಾಯಿತು.

ಗ್ರಂಥಾಲಯ ಪ್ರಾಧಿಕಾರದ ಸದಸ್ಯ ರಮೇಶ್ ನರಸಯ್ಯ ಅಧ್ಯಕ್ಷತೆ ವಹಿಸಿದ್ದರು. ಬಾಲ್ಯ ಫೌಂಡೇಶನ್ ಸಂಸ್ಥಾಪಕರಾದ ಕೆ.ಎಸ್. ಅನಿಲ್, ಉಮಾ ಅನಿಲ್, ನಗರ ಗ್ರಂಥಾಲಯದ ಪ್ರಾಧಿಕಾರದ ಸದಸ್ಯರಾದ ನಾಗರಾಜು, ಡಾ.ಬಿ. ಮಲ್ಲಿಕಾರ್ಜುನ ಸ್ವಾಮಿ, ಜಿಲ್ಲಾ ಕೇಂದ್ರ ಗ್ರಂಥಾಲಯದ ಉಪ ನಿರ್ದೇಶಕಿ ಸುಮಾ ಕೋಡಿಹಳ್ಳಿ, ಮುಖ್ಯ ಗ್ರಂಥಾಲಯಾಧಿಕಾರಿ ಟಿ. ಪದ್ಮಶ್ರೀ, ಪೀಪಲ್ಸ್ ಪಾರ್ಕ್ ಗ್ರಂಥಾಲಯದ ಶಾಖಾ ಸಮಿತಿ ಸದಸ್ಯೆ ದಿವ್ಯ ಜ್ಯೋತಿ ಮೊದಲಾದವರು ಇದ್ದರು.

ನಿಮ್ಹಾನ್ಸ್ ಆಸ್ಪತ್ರೆ ಜಮೀನು ಸಮಸ್ಯೆ ಬಗೆಹರಿಸಲು ಆಗ್ರಹ



• **ಕನ್ನಡಪ್ರಭ ವಾರ್ತೆ** ಮೈಸೂರು

ತಾಲೂಕಿನ ಗುಡುಮಾದನಹಳ್ಳಿ ಬಳಿ ರಾಜ್ಯ ಸರ್ಕಾರವು ನಿಮ್ಹಾನ್ಸ್ ಆಸ್ಪತ್ರೆ ನಿರ್ಮಿಸಲು ಮುಂದಾಗಿದ್ದು, ಈ ಕಾಮಗಾರಿಗೆ ಇರುವ ತೊಡಕು ನಿವಾರಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಡಾ.ಡಿ.ಜಿ. ಸಾಗರ್ ಬಣದ ಪದಾಧಿಕಾರಿಗಳು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ರಾಜ್ಯ ಸರ್ಕಾರವು ನೂರಾರು ಕೋಟಿ ರೂ. ವೆಚ್ಚದಲ್ಲಿ ವರುಣ ಬಳಿಯ ಗುಡು ಮಾದನ ಹಳ್ಳಿಯಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಆಸ್ಪತ್ರೆ ನಿರ್ಮಿಸಲುಮುಂದಾಗಿದ್ದು, ಅಗತ್ಯವಿರುವ 20 ಎಕರೆ ಸರ್ಕಾರಿ ಭೂಮಿಯನ್ನು ನಿಮ್ಹಾನ್ಸ್ ಸಂಸ್ಥೆಗೆ ಈಗಾಗಲೇ ಹಸ್ತಾಂತರಿಸಲಾಗಿದೆ ಎಂದರು.

ಮೈಸೂರು ಭಾಗದ ಸಾರ್ವಜನಿಕ ಆರೋಗ್ಯದ ಹಿತದೃಷ್ಟಿ ಹಾಗೂ ಭವಿಷ್ಯದ ಮೈಸೂರು ನಗರದ ಆರ್ಥಿಕಾಭಿವೃದ್ಧಿಗೆ ಪೂರಕವಾಗಿರುವ ಉದ್ದೇಶಿತ ಯೋಜನೆ ಇದಾಗಿದ್ದು, ನರರೋಗ ಸಂಬಂಧಿತ ಚಿಕಿತ್ಸೆ ಮತ್ತು ಅಪಘಾತಗಳಿಂದ ಉಂಟಾಗುವ ಮೆದುಳು ಸಂಬಂಧಿತ ತುರ್ತು ಚಿಕಿತ್ಸೆಗೆ ಅಘಾದವಾಗಿ ಬೆಳೆಯುತ್ತಿರುವ ಮೈಸೂರಿಗೆ ನಿಮ್ಹಾನ್ಸ್ ಅಗತ್ಯ ಮತ್ತು ತುರ್ತಾಗಿದೆ ಎಂದು ದಸಂಸ ಜಿಲ್ಲಾ ಸಂಚಾಲಕ ಮಲ್ಲೇಶ್ ಚುಂಚನಹಳ್ಳಿ, ರಾಜ್ಯ ಸಮಿತಿ ಸದಸ್ಯ ಗೋವಿಂದರಾಜು, ರಾಜಣ್ಣ ಮೊದಲಾದವರು ಇದ್ದರು.

ಡಾ.ಎನ್. ವಾಸಯ್ಯ ಸಂಪಾದಕತ್ವದ ವಿಶ್ವೇಶ್ವರಿ ಕೃತಿ ಬಿಡುಗಡೆ

• **ಕನ್ನಡಪ್ರಭ ವಾರ್ತೆ** ಮೈಸೂರು

ಡಾ.ಎನ್. ವಾಸಯ್ಯ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡ ಇನ್ಫೋಸಿಸ್ ನಾರಾಯಣಮೂರ್ತಿ ಅವರ ಪತ್ನಿ ಹಾಗೂ ಕನ್ನಡದ ಪ್ರಮುಖ ಲೇಖಕಿಯರಲ್ಲಿ ಒಬ್ಬರಾದ ಡಾ. ಸುಧಾ ಮೂರ್ತಿ ಕುರಿತ ವಿಶ್ವೇಶ್ವರಿ ಕೃತಿಯನ್ನು ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕ ಪ್ರೊ. ನೀಲಗಿರಿ ಎಂ. ತಳವಾರ್ ಬಿಡುಗಡೆಗೊಳಿಸಿದರು.

ಈ ವೇಳೆ ಮಾತನಾಡಿ, ಸುಧಾ ಮೂರ್ತಿ ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯ ಕುರಿತ 26 ಲೇಖನಗಳನ್ನು ಈ ಕೃತಿ ಒಳಗೊಂಡಿದೆ. ಹೆಸರಾಂತ ಉದ್ಯಮಿ, ಸಾಹಿತಿ ಆಗಿದ್ದರೂ ಅವರ ಸ್ವಭಾವ ಚಳಿ, ಮಳೆ, ಮಂಜು, ಕುದಿಸುವ ಬಿಸಿಲು ಇದ್ದರೂ ಕೂಡ ನಗು ನಗುತ ಇರುವೆನು ಎಂಬ ಬೇಂದ್ರ ಅವರ ನುಡಿಯಂತಿದೆ. ಸುಧಾಮೂರ್ತಿ ಅವರು ನಾರಾಯಣ ಮೂರ್ತಿ ಅವರಿಗೆ ಭರವಸೆಯ ಬೆಳಕಾಗಿ ನಿಂತವರು. ಸ್ತ್ರೀವಾದಿ ಎಂಬ ಹಣೆಪಟ್ಟಿ ಕಟ್ಟಿಕೊಳ್ಳದೆಯೇ ಸ್ತ್ರೀಯರ ಪರ ನಿಂತವರು ಇವರಾಗಿದ್ದಾರೆ. ನಾಡಿನ ಪ್ರಮುಖ ಲೇಖಕಿಯರಲ್ಲೂ ಒಬ್ಬರಾಗಿದ್ದಾರೆ. ಹೀಗಾಗಿ ಇವರ ಪರಿಚಯದ ಈ ಕೃತಿ ಓದುವುದು ಉಪಯುಕ್ತವಾದುದು ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಡಾ ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಮಾತನಾಡಿ, ಸುಧಾಮೂರ್ತಿ ಕನ್ನಡಿಗರ ಹೆಮ್ಮೆ, ಎಷ್ಟು ಎತ್ತರಕ್ಕೆ ಬೆಳೆಯಬಹುದು ಎಂಬುದಕ್ಕೆ ಸಾಕ್ಷಿಯಾಗಿರುವ ಇವರು ಎಲ್ಲರಿಗೂ ಆಶಾವಾದವಾಗಿದ್ದಾರೆ. ಅಷ್ಟು ಎತ್ತರಕ್ಕೆ ಬೆಳೆದರೂ ಕೂಡ ಸಾಮಾನ್ಯರಲ್ಲಿ ಸಾಮಾನ್ಯರು ಎಂಬಂತಿದ್ದಾರೆ. ಸರ್ಕಾರವನ್ನು ಟೀಕಿಸುವವರು ಹಲವರು, ಆದರೆ ಸಮಾಜಕ್ಕೆ ನಾನೇನು ಮಾಡಬಲ್ಲೆ ಎಂದು ಪ್ರಶ್ನಿಸಿಕೊಂಡು ಸಮಾಜಕ್ಕೆ ಕೊಡುಗೆ ನೀಡುವವರು ಕಡಿಮೆ. ಇವರ ಸಾಲಿಗೆ ಸುಧಾಮೂರ್ತಿ ನಿಲ್ಲುತ್ತಾರೆ. ಇವರ ಸಮಾಜಮುಖಿ ಕಾರ್ಯಗಳು ಅಸಂಖ್ಯ ಎಂದರು.

ಕೃತಿ ಕುರಿತ ಭಾರತೀಯ ಭಾಷಾ ಸಂಸ್ಥಾನದ ಹಿರಿಯ ಫೆಲೋ ಡಾ. ಮಾಲಿನಿ ಅಭ್ಯಂಕರ್‌ಮಾತನಾಡಿ, ಶ್ರೀಮಂತಿಕೆಯ ಇರುವಿಕೆ ಲವಲೇಶವೂ ಸುಳಿಯದಂತೆ ನೋಡಿಕೊಂಡು ಸಾಗುತ್ತಿರುವ ಸುಧಾಮೂರ್ತಿ ನಾಡು, ವಿಶ್ವಕ್ಕೆ ಆದರ್ಶ ಮಹಿಳೆಯಾಗಿದ್ದಾರೆ. ಹೀಗಾಗಿ ವಿಶ್ವೇಶ್ವರಿ ಎಂಬ ಶೀರ್ಷಿಕೆ ಕೃತಿಗೆ ಸಕಾಲಿಕವಾದುದು. ಅವರ ವ್ಯಕ್ತಿತ್ವ ಹಾಗೂ ಸಾಹಿತ್ಯ ಕುರಿತ ಈ ಕೃತಿ ಯುವ ಪೀಳಿಗೆಗೆ ಬೆಳಕು ನೀಡಬಹುದಾಗಿದೆ ಎಂದರು. ಕೃತಿಯ ಸಂಪಾದಕ ಡಾ.ಎನ್. ವಾಸಯ್ಯ, ಎಂ. ಚಂದ್ರಶೇಖರ್ ಇದ್ದರು.

'ಪರೀಕ್ಷೆ ವಿದ್ಯಾರ್ಥಿಗಳ ಜ್ಞಾನಮಟ್ಟ ಮೌಲ್ಯಮಾಪನ ಮಾಡಬೇಕು'



• **ಕನ್ನಡಪ್ರಭ ವಾರ್ತೆ** ಮೈಸೂರು

ಪರೀಕ್ಷೆಗಳು ವಿದ್ಯಾರ್ಥಿಗಳ ಜ್ಞಾನ ಮಟ್ಟವನ್ನು ಮೌಲ್ಯಮಾಪನ ಮಾಡಬೇಕು ಎಂದು ಜೆಎಸ್‌ಎಸ್ ಕಾನೂನು ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಕೆ.ಎಸ್. ಸುರೇಶ ಅಭಿಪ್ರಾಯಪಟ್ಟರು. ನಗರದ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪರೀಕ್ಷಾ ವಿಭಾಗದ ವತಿಯಿಂದ ಪರೀಕ್ಷಾ ಸುಧಾರಣೆಗಳು ವಿಷಯ ಕುರಿತು ಆಯೋಜಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ, ಪರೀಕ್ಷೆಗಳು ಕೇವಲ ಕಂಠಪಾಠ ಸಾಧನವಾಗದೆ ವಿದ್ಯಾರ್ಥಿಗಳ ನಿಜವಾದ ವಿಷಯದ ಗ್ರಹಿಕೆಯನ್ನು ಮೌಲ್ಯಮಾಪನ ಮಾಡಬೇಕಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ಮುಕ್ತ ವಿವಿ ಪರೀಕ್ಷಾಂಗ ಕುಲಸಚಿವ ಡಾ.ಸಿ.ಎಸ್. ಆನಂದಕುಮಾರ್, ಪರೀಕ್ಷೆಗಳು ವಿದ್ಯಾರ್ಥಿಗಳ ಜ್ಞಾನದ ಬೆಳವಣಿಗೆಯನ್ನು ಹೆಚ್ಚಿಸುತ್ತದೆ. ಶಿಕ್ಷಣದ ಉದ್ದೇಶ ವಿದ್ಯಾರ್ಥಿಗಳಲ್ಲಿ ಪ್ರಾಯೋಗಿಕ ಜ್ಞಾನದ ಸಾಮರ್ಥ್ಯ ಹೆಚ್ಚಿಸಿದಾಗ ಶೈಕ್ಷಣಿಕ ಬೆಳವಣಿಗೆ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ವೇದಿಕೆಯಲ್ಲಿ ಕಾಲೇಜಿನ ಪ್ರಾಂಶುಪಾಲ ಡಾ. ರೇಚಣ್ಣ, ಪರೀಕ್ಷಾ ನಿಯಂತ್ರಣಾಧಿಕಾರಿ ಎಂ.ಎಂ. ಸ್ವಾಮಿ ಇದ್ದರು. ಕಾರ್ಯಾಗಾರದಲ್ಲಿ ಅಧ್ಯಾಪಕರು ಪಾಲ್ಗೊಂಡಿದ್ದರು.

ಕಾರ್ಯಕ್ರಮದಲ್ಲಿ ಅಧ್ಯಾಪಕಿ ಸಿ.ಎಸ್. ಪುಷ್ಪಾ ಪ್ರಾರ್ಥಿಸಿದರು. ಆಂಗ್ಲ ಭಾಷಾ ವಿಭಾಗದ ಮುಖ್ಯಸ್ಥೆ ಪಿ. ವಸುಮತಿ ಸ್ವಾಗತಿಸಿದರು. ಕನ್ನಡ ವಿಭಾಗದ ಮುಖ್ಯಸ್ಥ ಆರ್.ಎಸ್. ಕುಮಾರ್‌ವಂದಿಸಿದರು. ಕಾರ್ಯಕ್ರಮದ ಉದ್ಘಾಟನೆ ಬಳಿಕ ಎರಡು ತಾಂತ್ರಿಕ ಗೋಷ್ಠಿಗಳು ನಡೆದವು. ಮೈಸೂರು ಶಿಕ್ಷಣ ಸಲಹೆಗಾರ ಪ್ರಾಧ್ಯಾಪಕ ಡಾ. ವಸಂತ್ ಡಿ. ಭಟ್ ಅವರು ಫಲಿತಾಂಶ ಆಧರಿತ ಶಿಕ್ಷಣ ಹಾಗೂ ವಹಿವಾಟುಗಳು ಮತ್ತು ಮೌಲ್ಯಮಾಪನ ವಿಷಯಗಳು ಕುರಿತಂತೆ ಉಪನ್ಯಾಸ ನೀಡಿದರು. ಗುಂಪು ಚರ್ಚೆ ಮತ್ತು ಹಿಮ್ಮಾಯಿತಿಯಲ್ಲಿ ಜೆಎಸ್‌ಎಸ್ ಕಾನೂನು ಕಾಲೇಜಿನ ಪರೀಕ್ಷಾ ನಿಯಂತ್ರಣಾಧಿಕಾರಿ ಪಿ. ಶಿವಾನಂದ ಭಾರತಿ ನಿರ್ವಹಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ. ರೇಚಣ್ಣ ಅವರು ಪರೀಕ್ಷಾ ನಿಯಂತ್ರಣಾಧಿಕಾರಿ ಎಂ.ಎಂ. ಸ್ವಾಮಿ ಅವರು ಸಂವಾದ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಓದು | ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ | ಮನೆಗೊಂದು ಗ್ರಂಥಾಲಯ ಯೋಜನೆಯಡಿಯಲ್ಲಿ ಗ್ರಂಥಾಲಯ ಉದ್ಘಾಟನೆ

ಪುಸ್ತಕ ಕೊಳ್ಳುವ, ಓದುವ, ಸಂಗ್ರಹಿಸುವ ಪ್ರವೃತ್ತಿ ಬೆಳೆಯಬೇಕು

• **ಕನ್ನಡಪ್ರಭ ವಾರ್ತೆ** ಮೈಸೂರು

ಓದುವ ಹವ್ಯಾಸವನ್ನು ಹೆಚ್ಚಿಸಿ ಪುಸ್ತಕ ಸಂಸ್ಕೃತಿಯನ್ನು ಹರಡುವುದೇ ಮನೆಗೊಂದು ಗ್ರಂಥಾಲಯ ಯೋಜನೆಯ ಉದ್ದೇಶವಾಗಿದೆ. ಪುಸ್ತಕಗಳನ್ನು ಕೊಳ್ಳುವ, ಓದುವ ಮತ್ತು ಸಂಗ್ರಹಿಸುವ ಪ್ರವೃತ್ತಿ ಪ್ರತಿಯೊಬ್ಬರಲ್ಲೂ ಬೆಳೆಯಬೇಕೆಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ ತಿಳಿಸಿದರು.

ಇತ್ತೀಚೆಗೆ ಹಿರಿಯ ಸಾಹಿತಿ ಡಾ. ಅಮ್ಮಸಂದ್ರ ಸುರೇಶ್ ಅವರ ಮನೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಮನೆಗೊಂದು ಗ್ರಂಥಾಲಯ ಯೋಜನೆಯಡಿಯಲ್ಲಿಗ್ರಂಥಾಲಯಉದ್ಘಾಟಿಸಿಮಾತನಾಡುತ್ತಿದ್ದರು. ಕರ್ನಾಟಕ ರಾಜ್ಯದ್ಯಂತ ಮನೆಗಳು, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಸುಮಾರು ಒಂದು ಕೋಟಿ ಗ್ರಂಥಾಲಯ ಆರಂಭಿಸುವುದು ಈ ಯೋಜನೆಯ ಉದ್ದೇಶವಾಗಿದ್ದು ಈಗಾಗಲೇ ಸುಮಾರು 36 ಸಾವಿರ ಗ್ರಂಥಾಲಯಗಳನ್ನು ಅನುಷ್ಠಾನಕ್ಕೆ ತರಲಾಗಿದೆ ಎಂದು ತಿಳಿಸಿದ ಅವರು ಪ್ರತಿಯೊಬ್ಬರಲ್ಲೂ ಪುಸ್ತಕಗಳನ್ನು ಖರೀದಿ ಮಾಡಿ ಓದುವ ಹವ್ಯಾಸ ಮತ್ತು ಪುಸ್ತಕಗಳನ್ನು ಸಂಗ್ರಹಿಸಿಡುವ ಹವ್ಯಾಸವನ್ನು ಈ ಯೋಜನೆಯ ಮೂಲಕ ಈಡೇರಿಸುವ ಆಶಯವನ್ನು ಹೊಂದಿರುವುದಾಗಿ ತಿಳಿಸಿದರು.



ಮನೆಗೊಂದು ಗ್ರಂಥಾಲಯ ಯೋಜನೆಯಡಿಯಲ್ಲಿ ಮೈಸೂರು ನಗರದಲ್ಲಿ ಈಗಾಗಲೇ ಹಲವು ನಾಗರಿಕರು ತಮ್ಮ ಮನೆಗಳಲ್ಲಿ ಗ್ರಂಥಾಲಯಗಳನ್ನು ಆರಂಭಿಸಿ ದ್ದಾರೆ. ಈ ಯೋಜನೆಗೆ ನಾಗರಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ ಎಂದು ಹೇಳಿದರು.

ಲೇಖಕ ಡಾ. ಪ್ರಸನ್ನ ಸಂತೆಕಡೂರು ಮಾತನಾಡಿ, ಜಗತ್ತಿನಲ್ಲಿ ಅತಿ ಹೆಚ್ಚು ಓದುವ ಹವ್ಯಾಸವನ್ನು ಒಳಗೊಂಡಿರುವ ದೇಶಗಳಲ್ಲಿ ಅಮೇರಿಕಾದ ನಂತರದ ಸ್ಥಾನವನ್ನು ಭಾರತ ಹೊಂದಿದ್ದು ಇದೊಂದು ಮಹತ್ವದ ವಿಷಯವಾಗಿದೆ. ಒತ್ತಡಗಳಿಂದ ಹೊರಬರಲು ಓದು ಸಹಕಾರಿಯಾಗಿದೆ. ಮಾನಸಿಕ ಆರೋಗ್ಯಕ್ಕೂ ಓದು ಉತ್ತಮ ಚಿಕಿತ್ಸೆಯಾಗಿದ್ದು ಓದಿನ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳುವ ಜೊತೆಗೆ ಮಾನಸಿಕ ಆರೋಗ್ಯವನ್ನು ನಮ್ಮದಾಗಿಸಿಕೊಳ್ಳಬಹುದು ಎಂದು ಹೇಳಿದರು.

ಪತ್ರಕರ್ತ ಕೆ. ನರಸಿಂಹಮೂರ್ತಿ ಮಾತನಾಡಿ, ಮೈಸೂರು ನಗರದಲ್ಲಿ ಹಲವು ಬುಕ್ ಕ್ಲಬ್ ಗಳು, ಪರಿಚಿತ ಮತ್ತು ಅಪರಿಚಿತ ಓದುಗರ ಬಳಗಗಳು ಇದ್ದು ಇವುಗಳು ಜನರಲ್ಲಿ ಓದುವ ಮತ್ತು ಕೃತಿಗಳನ್ನು ಪರಿಚಯ ಮಾಡಿಕೊಡುವ ಕೆಲಸಗಳನ್ನು ಮಾಡುತ್ತಿರುವುದು ಉತ್ತಮ ಬೆಳವಣಿಗೆ. ಕನ್ನಡ ಪುಸ್ತಕ ಪ್ರಾಧಿಕಾರ ಇಂತಹ ಸಂಸ್ಥೆ ಮೂಲಕ ಕೂಡ ಪುಸ್ತಕ ಸಂಸ್ಕೃತಿಯನ್ನು ಬೆಳೆಸಬಹುದು ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ. ಅಮ್ಮಸಂದ್ರ ಸುರೇಶ್ ದಂಪತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಮನೆಗೊಂದು ಗ್ರಂಥಾಲಯ ಯೋಜನೆಯ ಕರಪತ್ರಗಳನ್ನು ಬಿಡುಗೊಡೆಗೊಳಿಸಲಾಯಿತು.

ಶರಣ ದೇವರಾಜು ಪಿ. ಚಿಕ್ಕಹಳ್ಳಿ ಕಾರ್ಯಕ್ರಮ ನಿರೂಪಿಸಿದರು. ಎಚ್.ಡಿ. ಕೋಟೆ ತಾಲೂಕು ಕಸಾಪ ಅಧ್ಯಕ್ಷ ಕನ್ನಡ ಪ್ರಮೋದ್, ನೆರಳು ಚಾರಿಟಬಲ್ ಟ್ರಸ್ಟ್ ಕಾರ್ಯದರ್ಶಿ ಪುರುಷೋತ್ತಮ, ಖಜಂಚಿ ಕುಮಾರ್ ಮೊದಲಾದವರು ಇದ್ದರು.

ಸುದ್ದಿ ಸಿಂಚನ

ಜನಗಣತಿಯ ವೇಳೆ ಶಿಕ್ಷಕ ಹೃದಯಾಘಾತದಿಂದ ಸಾವು

ಕೆ.ಆರ್. ನಗರ : ಜನಗಣತಿ ವೇಳೆ ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರು ಹೃದಯಾಘಾತದಿಂದ ಮೃತಪಟ್ಟಿರುವ ಘಟನೆ ಪಟ್ಟಣದ ಕುವೆಂಪು ಬಡಾವಣೆಯಲ್ಲಿ



ಬುಧವಾರ ಬೆಳಗ್ಗೆ ನಡೆದಿದೆ. ಚಿಕ್ಕನಾಯಕನಹಳ್ಳಿಯ ಸಿ.ಕೆ. ರಂಗನಾಥ್ (53) ಮೃತಪಟ್ಟವರು. ಇವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ಇವರು ಹುಣಸೂರು ತಾಲೂಕಿನ ಗಾವಡಗೆರೆ ಹೋಬಳಿಯ ಮುಳ್ಳೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸಹ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಶಿಕ್ಷಣ ಇಲಾಖೆ ಸಿ.ಕೆ. ರಂಗನಾಥ್ ಅವರನ್ನು ಜನಗಣತಿ ಕಾರ್ಯಕ್ಕೆ ನಿಯೋಜಿಸಿತ್ತು. ಬುಧವಾರ ಬೆಳಗ್ಗೆ ಪಟ್ಟಣದ ಕುವೆಂಪು ಬಡಾವಣೆ ಜನಗಣತಿ ಮಾಡುವ ವೇಳೆ ಹೃದಯಘಾತವಾಗಿದ್ದು ಸ್ಥಳೀಯರು ತಕ್ಷಣವೇ ಪಟ್ಟಣದ ಸಾರ್ವಜನಿಕ ತಾಲೂಕು ಆಸ್ಪತ್ರೆ ಕರತರಲಾಗಿ ವೈದ್ಯರು ಮೃತಪಟ್ಟಿದ್ದಾರೆ ಎಂದು ತಿಳಿಸಿದರು. ಪಟ್ಟಣದ ಕೊಳಲು ರಸ್ತೆಯ ಕುವೆಂಪು ಬಡಾವಣೆಯಲ್ಲಿ ವಾಸವಾಗಿದ್ದರು. ಇವರ ಪಾರ್ಥಿವ ಶರೀರವನ್ನು ಸ್ವಗ್ರಾಮ ಚಿಕ್ಕನಾಯಕನಹಳ್ಳಿಗೆ ತೆಗೆದುಕೊಂಡು ಹೋಗಿ ಅಲ್ಲಿಯೇ ಅಂತ್ಯಕ್ರಿಯೆ ನಡೆಸಲಾಯಿತು.

ಸಂತಾಪ : ಹೃದಯಾಘಾತದಿಂದ ನಿಧನರಾದ ಸಿ.ಕೆ. ರಂಗನಾಥ್ ಅವರು ಸರಳ ಸಜ್ಜನಿಕೆಯ ಶಿಕ್ಷಕರಾಗಿದ್ದ ವರು, ವೃತ್ತಿಯಲ್ಲಿ ಕರ್ತವ್ಯ ನಿಷ್ಠೆವುಳ್ಳವರಾಗಿದ್ದವರು ಇವರ ಸಾವು ಕುಟುಂಬಕ್ಕೆ ನೋವು ಭರಸುವ ಶಕ್ತಿ ದೇವರು ಕರುಣಿಸಲಿ ಎಂದು ಮಾಜಿ ಸಚಿವ ಸಾ.ರಾ. ಮಹೇಶ್ ಕಂಬನಿಮಿಡಿದಿದ್ದಾರೆ.

9ಕ್ಕೆ ಸೈನ್ಸ್ ಸಂಜೆ ಮಾತು

ಮೈಸೂರು: ಕಲಾಸುರುಚಿಯ ಸುರುಚಿ ರಂಗಮನೆಯು ಮೇ 9 ರಂದು ಸಂಜೆ 6.30 ರಿಂದ 7.30 ರವರೆಗೆ ಸೈನ್ಸ್ ಸಂಜೆ ಕಾರ್ಯಕ್ರಮ ನಡೆಸುತ್ತಿದೆ. ಇಂಡಿಯನ್ ಇನ್‌ಸ್ಟಿಟ್ಯೂಟ್ಆಫ್‌ಸೈನ್ಸ್ ನ ಮೆದುಳು ಅಧ್ಯಯನ ಕೇಂದ್ರದ ಪ್ರಧಾನ ವೈಜ್ಞಾನಿಕ ಅಧಿಕಾರಿ ಡಾ. ಲತಾ ದಿವಾಕರ್ ಅವರು ಅರುಳು ಮರುಳು ವಿಷಯ ಕುರಿತು ಮಾತನಾಡುವವರು ಎಂದು ಸಂಸ್ಥೆಯ ವಿಜಯಾ ಸಿಂಧುವಳ್ಳಿ ತಿಳಿಸಿದ್ದಾರೆ.

ಪೌರ ಸಮಸ್ಯೆ

ಅಂಗಡಿಗಳಿಂದ ರಸ್ತೆ ಒತ್ತುವರಿಯೇ?



ನಗರದ, ಪ್ರಮುಖ ವಾಣಿಜ್ಯ ರಸ್ತೆಗಳಾದ, ಅಶೋಕ ರಸ್ತೆ, ಅರಸು ರಸ್ತೆ, ಸಯ್ಯಾಜಿರಾವ್ ರಸ್ತೆ, ಧನ್ವಂತರಿ ರಸ್ತೆ, ಶಿವರಾಂ ಪೇಟೆಯ ಹಲವಾರು ಕಡೆಗಳಲ್ಲಿ ಕೆಲವು ವ್ಯಾಪಾರಿಗಳು ತಮ್ಮ ಅಂಗಡಿಗಳಿಗೆ ಗಿರಾಕಿಗಳು ಬರಲೆಂದು, ತಮ್ಮ ಅಂಗಡಿಗಳ ಮುಂಭಾಗ ಸಾರ್ವಜನಿಕರು ಓಡಾಡುವ ಮುಖ್ಯ ರಸ್ತೆಯ ಪಾರ್ಕಿಂಗ್ ರಸ್ತೆಯಲ್ಲೇ ಕಬ್ಬಿಣದ ಬಾಕ್ಸ್ ಗಳನ್ನು ಹಾಕಿದ್ದಾರೆ.

ಇದು ಸಾರ್ವಜನಿಕರ ಅನುಕೂಲಕ್ಕಾಗಿ ಇರುವ ರಸ್ತೆ, ಈ ರಸ್ತೆಯನ್ನು ಅಕ್ರಮವಾಗಿ ಆಕ್ರಮಿಸಿ ಕೊಳ್ಳಲು ಇವರಿಗೆ ಯಾವ ಅಧಿಕಾರ ಇದೆ? ಇನ್ನು ಕೆಲವು ವ್ಯಾಪಾರಿಗಳಂತೂ ತಮ್ಮ ಅಂಗಡಿಗಳ ಮುಂದೆ ಯಾವುದೇ ವಾಹನಗಳನ್ನು ಪಾರ್ಕಿಂಗ್ ಮಾಡಲು ಬಿಡುವುದಿಲ್ಲ. ಸಾರ್ವಜನಿಕರು ಪಾರ್ಕಿಂಗ್ ಮಾಡಲು ಹೋದರೆ, ಅಂಗಡಿ ಮಾಲೀಕರು ಜಗಳಕ್ಕೆ ಬರುತ್ತಾರೆ. ಅಂಗಡಿಯ ಮುಂದಿನ ಜಾಗ ನಮಗೆ ಸೇರಿದ್ದು ಎಂದು ವಾದಿಸುತ್ತಾರೆ. ಈ ವಿಚಾರವನ್ನು ಅಲ್ಲಿನ ಟ್ರಾಫಿಕ್ ಪೊಲೀಸ್ ರ ಗಮನಕ್ಕೆ ತಂದರೂ ಅದು ಪ್ರಯೋಜನಕ್ಕೆ ಬಂದಿಲ್ಲ. ಈ ಬಗ್ಗೆ ಟ್ರಾಫಿಕ್ ಪೊಲೀಸ್ ಅಧಿಕಾರಿಗಳು ಗಮನ ಹರಿಸಿ, ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕು.

• **ಬೂಕನಕೆರೆ ವಿಜೇಂದ್ರ,**
ಕುವೆಂಪುನಗರ, ಮೈಸೂರು

ಸಿದ್ಧರಾಮೇಶ್ವರ ಜಯಂತಿ ಅದ್ಧೂರಿ ಮೆರವಣಿಗೆ

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭ, ಕಲಾಮದಿರದಲ್ಲಿ ಅಂತ್ಯ | ವಿವಿಧ ಜಾನಪದ ಕಲಾ ತಂಡಗಳ ಮೆರುಗು



ಮೈಸೂರಿನಲ್ಲಿ ಬುಧವಾರ ಶ್ರೀ ಸಿದ್ದರಾಮೇಶ್ವರ ಜಯಂತಿ ಅಂಗವಾಗಿ ನಡೆದ ಮೆರವಣಿಗೆಗೆ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹಿರಿಯ ಸಾಹಿತಿ ಡಾ.ಎಸ್.ಜಿ. ಸಿದ್ದರಾಮಯ್ಯ ಮತ್ತು ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ. ರಾಮಪ್ಪ ಚಾಲನೆ ನೀಡಿದರು.





ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಸಂಘಟನೆಗಳ ಪ್ರಮುಖರು, ಜಾನಪದ ಕಲಾ ತಂಡದವರು ಮತ್ತು ಕಳಶ ಹೊತ್ತ ಯುವತಿಯರು ಇದ್ದಾರೆ.

• **ಕನ್ನಡಪ್ರಭ ವಾರ್ತೆ ಮೈಸೂರು**

ಶ್ರೀ ಸಿದ್ದರಾಮೇಶ್ವರ ಜಯಂತಿ ಅಂಗವಾಗಿ ನಗರದಲ್ಲಿ ಬುಧವಾರ ಅದ್ದೂರಿ ಮೆರವಣಿಗೆ ನಡೆಯಿತು.

ನಗರದ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ಆರಂಭವಾದ ಮೆರವಣಿಗೆಯು ಕಲಾಮಂದಿರದವರೆಗೆ ಅದ್ದೂರಿಯಾಗಿ ನೆರವೇರಿತು. ಮಿನಿ ದಸರಾ ಮಾದರಿಯಲ್ಲಿ ವಿವಿಧ ಜಾನಪದ ಕಲಾತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಬಳಿ ಶ್ರೀ ಸಿದ್ದರಾಮೇಶ್ವರರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಭೋವಿ ಗುರುಪೀಠದ ಶ್ರೀ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ, ಹಿರಿಯ ಸಾಹಿತಿ ಡಾ.ಎಸ್.ಜಿ. ಸಿದ್ದರಾಮಯ್ಯ ಮತ್ತು ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಅವರು ಮೆರವಣಿಗೆಗೆ ಚಾಲನೆ ನೀಡಿದರು. ಶ್ರೀಇಮ್ಮಡಿಸಿದ್ದರಾಮೇಶ್ವರ ಸ್ವಾಮೀಜಿಯನ್ನು ಮೆರವಣಿಗೆ ನಡೆಸಲಾಯಿತು. ಕಳಸ ಹೊತ್ತ ಮಹಿಳೆಯರು, ನಂದಿಧ್ವಜ ಕುಣಿತ, ಗಾರಡು ಗೊಂಬೆ, ಹುಲಿ ವೇಷಧಾರಿಗಳು, ಮಂಗಳವಾದ್ಯ, ಚಂಡೆ, ಡೊಳ್ಳು ಕುಣಿತ ಸೇರಿದಂತೆ ಅನೇಕ ಜಾನಪದ ಕಲಾತಂಡಗಳು



ಮೈಸೂರಿನಲ್ಲಿ ಶ್ರೀ ಸಿದ್ದರಾಮೇಶ್ವರ ಜಯಂತಿ ಅಂಗವಾಗಿ ನಡೆದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಸಂಘಟನೆಗಳ ಪ್ರಮುಖರು, ಜಾನಪದ ಕಲಾ ತಂಡದವರು ಮತ್ತು ಕಳಶ ಹೊತ್ತ ಯುವತಿಯರು ಇದ್ದಾರೆ.

ಪಾಲ್ಗೊಂಡು ಮೆರವಣಿಗೆಯ ಮೆರುಗು ಹೆಚ್ಚಿಸಿದವು. ಅರಮನೆ ಉತ್ತರ ದ್ವಾರದಿಂದ ಆರಂಭವಾದ ಮೆರವಣಿಯು, ಕೆ.ಆರ್. ವೃತ್ತ, ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ವಿನೋಭಾ ರಸ್ತೆಯ ಮೂಲಕ ಕಲಾಮಂದಿರ ತಲುಪಿತು.


ಭೋವಿ ಸಮಾಜದ ವಿವಿಧ ಸಂಘಟನೆಗಳ ಪ್ರಮುಖರು, ಮಹಿಳಾ ಸಂಘದ ಪದಾಧಿಕಾರಿಗಳು ಪಾಲ್ಗೊಂಡಿದ್ದರು. ಬಿರು ಬಿಸಿಲನ್ನೂ ಲೆಕ್ಕಿಸದೆ ಮೆರವಣಿಗೆಯಲ್ಲಿ ಪಾಲ್ಗೊಂಡರು. ಬಿಸಿಲಿನ ಝುಳಕ್ಕೆ ಕಲಾವಿದರು ಸುಸ್ತಾಗಿ ಹೋದರು. ಸ್ಥಳೀಯ ಮುಖಂಡರಾದ ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ನಿಗಮದ ಮಾಜಿ ಅಧ್ಯಕ್ಷ ಜಿ.ವಿ. ಸೀತಾರಾಮ್ ಮೊದಲಾದವರು ಇದ್ದರು.

ಬಸವಣ್ಣ - ಸಿದ್ಧರಾಮೇಶ್ವರರ ತತ್ವಗಳು ಜೀವಂತ

ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಅಭಿಮತ | ಸಿದ್ದರಾಮೇಶ್ವರ ಪ್ರಶಸ್ತಿ ಸ್ವೀಕಾರ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಮಾನತೆ, ಸಹಬಾಳ್ವೆ, ಸಾಮಾಜಿಕ ನ್ಯಾಯಕ್ಕಾಗಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬರಲ್ಲೂ ಬಸವಣ್ಣ ಮತ್ತು ಸಿದ್ದರಾಮೇಶ್ವರರ ತತ್ವಗಳು ಜೀವಂತವಾಗಿವೆ ಎಂದು ಸಾಹಿತಿ ಪ್ರೊ.ಎಸ್.ಜಿ. ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.



ಕಲಾಮಂದಿರದಲ್ಲಿ ನಡೆದ ಸಿದ್ದರಾಮೇಶ್ವರ ಜಯಂತಿ ಕಾರ್ಯಕ್ರಮದಲ್ಲಿ 2025-26ನೇ ಸಾಲಿನ ಕಾಯಕಯೋಗಿ ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಅವರು, 12ನೇ ಶತಮಾನದ ಶರಣ ಚಳವಳಿ ಸಂಘಟಿಸಿದ ದೊಡ್ಡ ಶಕ್ತಿ ಬಸವಣ್ಣನವರು. ಅದನ್ನು ಮುನ್ನಡೆಸಿದ ಮಹಾಚೇತನ ಅಲ್ಲಮಪ್ರಭುಗಳು. ಸಿದ್ದರಾಮೇಶ್ವರರು ಸಿದ್ಧ ಪಂಥಕ್ಕೆ ಸೇರಿದವರು. ಆನಂತರ ನಾಥ ಪಂಥಕ್ಕೆ ಅಲ್ಲಮಪ್ರಭುವಿನಿಂದಾಗಿ ಬದಲಾವಣೆಗೊಂಡವರು. ಕೊನೆಗೆ ಶಿವಯೋಗಿಯಾದವರು. ಲಿಂಗಾಯತ ಧರ್ಮ, ಶರಣ ಚಳುವಳಿ ಹುಟ್ಟಿದ್ದು ಉತ್ತರ ಕರ್ನಾಟಕದಲ್ಲಿ. ಆದರೆ ದಕ್ಷಿಣದಲ್ಲಿ ಹೆಚ್ಚು ಪ್ರಚಾರ ಮಾಡಿದವರು ಸಿದ್ದರಾಮೇಶ್ವರರು ಎಂದರು.

ದೇಶದೊಳಗೆ ಚಾತುರ್ವರ್ಣಿಯ ಹಿಂದೂ ಧರ್ಮ ಕೇವಲ ರಾಜಕೀಯ ಕಾರಣಕ್ಕಾಗಿ ಬಳಸುತ್ತಿರುವ ಧರ್ಮವೇ ಹೊರತು, ಅಸಲಿ ಧರ್ಮದ ಪರಿಕಲ್ಪನೆ ಬೇರೆಯೇ ಇತ್ತು. ವೈದಿಕ ಧರ್ಮದ ಚಾತುರ್ವರ್ಣ ವ್ಯವಸ್ಥೆಯ ಮೇಲು-ಕೀಳು, ಶ್ರೇಷ್ಠ-ಕನಿಷ್ಠ ಎನ್ನುವ ಅಸಮಾನತೆ ನಿವಾರಿಸುವುದು ಅಂದು ಅಸಾಧ್ಯವಾಗಿತ್ತು. ಈ ಕಾರಣಕ್ಕಾಗಿ ದೇಶದಲ್ಲಿ ಹಲವು ಪಂಥಗಳು, ಧರ್ಮಗಳು ಹುಟ್ಟಿಕೊಂಡವು. ಆದರೆ, ಅವು ವೈದಿಕವನ್ನು ನೇರವಾಗಿ ಎದುರಿಸಲಿಲ್ಲ. ಆದರೆ, ವೈದಿಕವನ್ನು ನೇರವಾಗಿ ಎದುರಿಸಿದ್ದು ಲಿಂಗಾಯತ, ಶರಣರ ಧರ್ಮ. ಇವರು ವೈದಿಕ ಪಠ್ಯಗಳಾದ ವೇದ, ಆಗಮ, ಪುರಾಣ, ಸ್ಮೃತಿ, ತರ್ಕವನ್ನು ಸಾರಾಸಗಟಾಗಿ ತಿರಸ್ಕರಿಸಿದರು.

ಇತ್ತೀಚಿನ ದಿನಗಳಲ್ಲಿ ಶರಣ ಚಳುವಳಿಯನ್ನು ಆತ್ಮವಿಮರ್ಶೆಯ ದೃಷ್ಟಿಯಿಂದ ಆಲೋಚಿಸಬೇಕಿದೆ. ಸಿದ್ದರಾಮೇಶ್ವರರು ತಮ್ಮ ವಚನದಲ್ಲಿ ನಮ್ಮ ನಡಾವಳಿಗೆ ನಮ್ಮ ಪುರಾತನರ ನುಡಿಗಳೇ ಇಷ್ಟವಯ್ಯ ಎನ್ನುತ್ತಾರೆ. ಸನಾತನಕ್ಕೆ ಪರ್ಯಾಯವಾಗಿ ಶರಣರು ಹೇಳಿದ ಪರಂಪರೆಯ ವಕ್ತಾರರೇ ಪುರಾತನರು. ಇವರ ದೃಷ್ಟಿಯಲ್ಲಿ ಪರಂಪರೆ ಎಂದರೆ ಹಳೆಯದಲ್ಲ, ಅದು ಅರಿವಿನ ಮೂಲಕ ನಿತ್ಯ ನೂತನವಾಗುತ್ತಾ ವರ್ತಮಾನದಲ್ಲೂ ಪ್ರವಹಿಸುವುದು. ಸನಾತನ ಎಂದರೆ ಸ್ಥಗಿತವಾಗಿರುವುದು, ಜಡವಾದುದು ಮತ್ತು ಚೈತನ್ಯವಿಲ್ಲದ್ದು. ಅದಕ್ಕಾಗಿಯೇ ಶರಣರು ಸನಾತನವನ್ನು ತಿರಸ್ಕರಿಸಿ ಪುರಾತನರ ನುಡಿಗಳನ್ನು ಅಪ್ಪಿಕೊಂಡರು ಎಂದರು.

ಅನುದಾನ ಬಿಡುಗಡೆಗೆ ರಾಮಸ್ವಾಮಿ ಆಗ್ರಹ

• **ಕನ್ನಡಪ್ರಭ ವಾರ್ತೆ** ಮೈಸೂರು

ಸರ್ಕಾರವು ಎಸ್.ಸಿ.ಪಿ - ಟಿ.ಎಸ್.ಪಿ ಯೋಜನೆಯಡಿ ಭರವಸೆ ನೀಡಿದ್ದ ಅಭಿವೃದ್ಧಿ ಕಾಮಗಾರಿಗಳಿಗೆ ಕೂಡಲೇ ಹಣ ಬಿಡುಗಡೆ ಮಾಡಬೇಕೆಂದು ನಾಗವಾಲ ಗ್ರಾಪಂ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಸರ್ಕಾರದ ಭರವಸೆಗಳನ್ನು ನಂಬಿ ಅನುದಾನಕ್ಕಾಗಿ ಕಚೇರಿಗಳಿಗೆ ಅಲೆದರೂ ಯಾವುದೇ ಪ್ರಯೋಜನವಾಗುತ್ತಿಲ್ಲ. ಈ ವಿಷಯವಾಗಿ ಕ್ಷೇತ್ರದ ಶಾಸಕರು, ವಿಧಾನ ಪರಿಷತ್ ಸದಸ್ಯರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಿದರೂ ಯಾವುದೇ ಸ್ಪಂದನೆ ಸಿಕ್ಕಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

2023ರಿಂದಲೇ ಮನವಿ ಸಲ್ಲಿಸುತ್ತಾ ಬಂದಿದ್ದರೂ, ಪ.ಜಾತಿ ಮತ್ತು ಪ. ಪಂಗಡದ ಬಡ ಕಲಾವಿದರಿಗೆ ಈವರೆಗೂ ಗೌರವ ಧನ ಬಿಡುಗಡೆಗೊಳಿಸಿಲ್ಲ. ಅರಣ್ಯದ ಅಂಚಿನಲ್ಲಿರುವ ಪ.ಜಾತಿ ಅವರ ಜಮೀನುಗಳಿಗೆ ಕಾಡುಪ್ರಾಣಿಗಳ ಹಾವಳಿ ಹೆಚ್ಚಾಗಿದೆ. ಬೆಳೆದ ಫಸಲನ್ನು ರಕ್ಷಿಸಿಕೊಳ್ಳಲು ಸೋಲಾರ್ ತಂತಿ ಬೇಲಿ ಅಳವಡಿಸಲು ಎಸ್ಸಿಪಿ - ಟಿ.ಎಸ್.ಪಿ ಅಡಿ ಅನುದಾನ ನೀಡಬೇಕೆಂದು ಹಲವು ಬಾರಿ ಕೋರಿದ್ದರೂ ಸರ್ಕಾರ ಮೌನ ವಹಿಸಿದೆ.

ಯೋಜನೆಯ ಹಣವು ಬೇರೆಡೆ ದುರ್ಬಳಕೆಯಾಗದಂತೆ ಎಚ್ಚರ ವಹಿಸಿ, ಕೂಡಲೇ ಅಭಿವೃದ್ಧಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಬೇಕು. ಪ.ಜಾತಿ ಮತ್ತು ಪ.ಪಂಗಡದವರು ಆರ್ಥಿಕವಾಗಿ ಹಿಂದುಳಿದವರಾಗಿದ್ದು, ಮೊದಲಿನಿಂದಲೂ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದ್ದಾರೆ. ಆದ್ದರಿಂದಸರ್ಕಾರವುತನ್ನಆಶ್ವಾಸನೆಯನ್ನು ಈಡೇರಿಸುವ ಮೂಲಕ ಈ ಸಮುದಾಯಗಳ ಹಿತ ಕಾಯಬೇಕು ಎಂದು ಅವರು ಮನವಿ ಮಾಡಿದ್ದಾರೆ.

ಸಕ್ರಿಯ ರಾಜಕಾರಣಕ್ಕೆ ಮರಳಲು ಪಾಪಣ್ಣಗೆ ಮಂಜು ಮನವಿ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರ ಜೆಡಿಎಸ್ ಅಧ್ಯಕ್ಷ ಹಾಗೂ ನಗರ ಪಾಲಿಕೆ ಮಾಜಿ ಸದಸ್ಯ ಎಸ್.ಬಿ.ಎಂ, ಮಂಜು ಅವರು ಮೇಟಗಳ್ಳಿ ಬಡಾವಣೆಯ ಮುಖಂಡ ಪಾಪಣ್ಣ ಅವರನ್ನು ರಾಜಕೀಯದಲ್ಲಿ ಸಕ್ರಿಯವಾಗಿ ಇರುವಂತೆ ಕೋರಿದರು. ಈ ಹಿಂದೆ ಜೆಡಿಎಸ್ ಪಕ್ಷದಲ್ಲಿದ್ದು ನಂತರದ ದಿನಗಳಲ್ಲಿ ಸಕ್ರಿಯವಾಗಿ ಇಲ್ಲದ ಕಾರಣದಿಂದ ಅವರ ಮನೆಗೆ ತೆರಳಿ ಅವರನ್ನು ಮುಂದಿನ ದಿನಗಳಲ್ಲಿ ಪಕ್ಷದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಕೋರಿದರು.

ಇದಕ್ಕೆ ಸ್ಪಂದಿಸಿದ ಪಾಪಣ್ಣ ಅವರು ಮುಂದಿನ ದಿನಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿ ತಿಳಿಸಿದರು. ಈ ವೇಳೆ



ಚಾಮರಾಜ ಕ್ಷೇತ್ರದ ಜೆಡಿಎಸ್ ಅಧ್ಯಕ್ಷ ಚಂದ್ರಹಾಸ್, ನಗರ ಪಾಲಿಕೆ ಮಾಜಿ ಸದಸ್ಯ ರಮೇಶ್, ಪ.ಜಾತಿ ವಿಭಾಗದ ಅಧ್ಯಕ್ಷ ಪ್ರಕಾಶ್, ದೇವೇಗೌಡ, ಕಾರ್ಮಿಕ ವಿಭಾಗದ ಮಾಜಿ ಅಧ್ಯಕ್ಷ ರಮೇಶ್‌ಕುಮಾರ್, ನಗರ ಉಪಾಧ್ಯಕ್ಷ ಭೋಜರಾಜ್, ಚೆಲುವರಾಜು, ಒಟಿಆರ್ ಕುಮಾರ್ ಮೊದಲಾದವರು ಇದ್ದರು.

ಜಗದೀಶ್ ಹಿರೇಮನಿ ನಿಧನಕ್ಕೆ ಡಾ. ನಿಂಗರಾಜ್ ಗೌಡ ಸಂತಾಪ

• **ಕನ್ನಡಪ್ರಭ ವಾರ್ತೆ** ಮೈಸೂರು

ಬಿಜೆಪಿ ಮುಖಂಡ, ರಾಜ್ಯ ಘಟಕದ ಮಾಜಿ ಕಾರ್ಯದರ್ಶಿ ಜಗದೀಶ್ ಹಿರೇಮನಿ ಅವರ ನಿಧನಕ್ಕೆ ಮೈಸೂರು ವಿವಿ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್ ಗೌಡ ತೀವ್ರ ಸಂತಾಪ ಸೂಚಿಸಿದ್ದಾರೆ. ಹಿರೇಮನಿ ಅವರ ಅಕಾಲಿಕ ನಿಧನದ ಸುದ್ದಿ ಕೇಳಿ ದಿಗ್ಭ್ರಮೆಯಾಗಿದೆ.



ಅವರ ನಿಧನದಿಂದ ಪಕ್ಷ ಒಬ್ಬ ಸಕ್ರಿಯ ಮುಖಂಡರನ್ನು ಕಳೆದುಕೊಂಡಿದ್ದು, ವೈಯಕ್ತಿಕವಾಗಿ ಕೂಡ ಭರಿಸಲಾಗದ ನಷ್ಟವಾಗಿದೆ ಎಂದು ಮೈಸೂರು ವಿಭಾಗದ ಬಿಜೆಪಿ ಸಹ ಪ್ರಭಾರಿಯೂ ಆದ ನಿಂಗರಾಜ ಗೌಡ ಹೇಳಿದ್ದಾರೆ.

ಎಬಿವಿಪಿಕಾಲದಿಂದಲೂಸಂಘಟನೆಯೇ ಉಸಿರೆಂದು ಬದುಕಿದ ಅವರು ಕಾರ್ಯಕರ್ತರಾಗಿ, ಕೇಂದ್ರ ಸರ್ಕಾರದ ರಾಷ್ಟ್ರೀಯ ಸಫಾಯಿ ಕರ್ಮಚಾರಿ ಆಯೋಗದ ಸದಸ್ಯರಾಗಿ, ರಾಜ್ಯ ಕಾರ್ಯದರ್ಶಿಗಳಾಗಿ ಪಕ್ಷಕ್ಕೆ ಗಣನೀಯ ಸೇವೆ ಸಲ್ಲಿಸಿದ್ದ ಅವರು, ಪ್ರಸ್ತುತ ಎಸ್.ಐ.ಆರ್ ಜಾಗೃತಿ ಅಭಿಯಾನದ ರಾಜ್ಯ ಸಂಚಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದರು ಎಂದು ಸ್ಮರಿಸಿದ್ದಾರೆ.

ವೀರಶೈವ ಲಿಂಗಾಯತ ಮಹಾಸಭಾ ಚುನಾವಣೆ ನಾಮಪತ್ರ ಸಲ್ಲಿಕೆ



• **ಕನ್ನಡಪ್ರಭ ವಾರ್ತೆ** ಮೈಸೂರು

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಮೈಸೂರು ತಾಲೂಕು ಘಟಕದ ನಿರ್ದೇಶಕರ ಸ್ಥಾನಕ್ಕೆ ಶಿವಕುಮಾರ ಚಿಕ್ಕಕಾನ್ಯ ಅವರು ನಾಮಪತ್ರ ಸಲ್ಲಿಸಿದ್ದಾರೆ. ಮಹಾಸಭೆಯ ಸಂಘಟನಾ ಬಲವನ್ನು ಹೆಚ್ಚಿಸಲು ಹಾಗೂ ಸಮಾಜಮುಖಿ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಲು ತಮ್ಮ ಬದ್ಧತೆ ವ್ಯಕ್ತಪಡಿಸಿದ ಶಿವಕುಮಾರ ಚಿಕ್ಕಕಾನ್ಯ, ಸಮುದಾಯದ ಆಶೋತ್ತರ ಈಡೇರಿಸಲು ತಾವು ಸಿದ್ಧರಾಗಿರುವುದಾಗಿ ತಿಳಿಸಿದ್ದಾರೆ. ಈ ವೇಳೆ ಇಲವಾಲ ಕುಮಾರ್, ಆರ್. ಶಿವಲಿಂಗ ಸ್ವಾಮಿ, ಮಧು, ಪ್ರದೀಪ್, ರಾಜೇಶ್ ಹಾಗೂ ಕಾರ್ತಿಕ್ ಸೇರಿದಂತೆ ಹಲವರು ಇದ್ದರು.

ಕರ್ನಾಟಕ ಬಿಜೆಪಿ ಸಂಭ್ರಮಾಚರಣೆ ಏಕೆ?

ಮೈಸೂರು: ಕರ್ನಾಟಕದ ಎರಡು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಸೋಲು ಅನುಭವಿಸಿದರೂ ಕರ್ನಾಟಕದ ಬಿಜೆಪಿ ನಾಯಕರು ಸಂಭ್ರಮಾಚರಣೆ ಮಾಡಿ ಅಪಹಾಸ್ಯಕ್ಕೆ ಗುರಿಯಾಗಿದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ವಕ್ತಾರ ಕೆ. ಮಹೇಶ್ ಹೇಳಿದ್ದಾರೆ. ಪಂಚರಾಜ್ಯಗಳಲ್ಲಿ 3 ರಾಜ್ಯಗಳಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಿದೆ. 2028ರಲ್ಲಿ ಕರ್ನಾಟಕದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲಿದೆ ಎನ್ನುತ್ತಿರುವುದು ಹಗಲು ಕನಸು ಕಾಣುತ್ತಿರುವಂತಿದೆ. ಕರ್ನಾಟಕದ ಎರಡು ಕ್ಷೇತ್ರದಲ್ಲೂ ಸೋತರೂ ಸಂಭ್ರಮಾಚರಣೆ ಮಾಡುತ್ತಿರುವುದು ನಾಚಿಕೆಗೇಡು. ಅಲ್ಲದೇ ಕಾಂಗ್ರೆಸ್ ನಾಯಕರ ಟೀಕೆಯೂ ಖಂಡನೀಯ ಎಂದು ಅವರು ತಿಳಿಸಿದ್ದಾರೆ.

ಮಾರ್ಗದರ್ಶನ | ಶಾಸಕ ಕೆ. ಹರೀಶ್ ಗೌಡ ಅಭಿಮತ

ಸಮಾಜಕ್ಕೆ ಬ್ರೈನ್ ಯೋಗ ಅತ್ಯಗತ್ಯ



• **ಕನ್ನಡಪ್ರಭ ವಾರ್ತೆ** ಮೈಸೂರು

ಬ್ರೈನ್ ಎಕ್ಸ್ ಯೋಗ ರಾಷ್ಟ್ರೀಯ ಬೌದ್ಧಿಕ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ, ಬ್ರೈನ್ ಯೋಗ ಚಾಲೆಂಜ್ - ಸ್ಕಾಲರ್ ಶಿಪ್ ಪ್ರೀಮಿಯರ್‌ಲೀಗ್ ಕರ್ನಾಟಕ 2026 ಸ್ಪರ್ಧೆಯ ಲೋಗೋ ಹಾಗೂ ಫ್ಯಾಮಿಲಿ ಸ್ಕಾಲರ್ ಶಿಪ್ ಕಿಟ್ ವಿತರಣಾ ಕಾರ್ಯಕ್ರಮಕ್ಕೆ ಜಲದರ್ಶಿನಿ ಅತಿಥಿ ಗೃಹದಲ್ಲಿ ಚಾಲನೆ ನೀಡಲಾಯಿತು.

ಕೆ.ಎಂ.ಪಿ.ಕೆ ಚಾರಿಟಬಲ್ ಟ್ರಸ್ಟ್ ಹಾಗೂ ಜನಸ್ಪಂದನ ಫೌಂಡೇಶನ್ ಸಹಯೋಗದೊಂದಿಗೆ ಹಮ್ಮಿಕೊಂಡ ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಕೆ. ಹರೀಶ್ ಗೌಡ, ಇಂದಿನ ಒತ್ತಡದ ಸಮಾಜದಲ್ಲಿ ಬ್ರೈನ್ ಯೋಗವು ಪ್ರತಿಯೊಬ್ಬರಿಗೂ ಅತ್ಯಂತ ಉಪಯುಕ್ತವಾಗಿದೆ. ಪೋಷಕರು ಮತ್ತು ವಿದ್ಯಾರ್ಥಿಗಳು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸ್ತ್ರೀ ಶಕ್ತಿಯಿಂದ ಮನೋಶಕ್ತಿವರೆಗೆ ಎಂಬ ಆಶಯದೊಂದಿಗೆ ಈ ಕಾರ್ಯಕ್ರಮ ಆಯೋಜಿಸಿದ್ದು, ಅರ್ಹ ವಿದ್ಯಾರ್ಥಿಗಳಿಗೆ ಶಿಕ್ಷಣ ಮತ್ತು ಬೌದ್ಧಿಕ ವಿಕಸನಕ್ಕೆ ಪೂರಕವಾದ ಕಿಟ್ ತಲುಪಿಸುವ ಗುರಿ ಇದೆ.

ಈ ವೇಳೆ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ ಹಾಗೂ ಮಾಜಿ ಮೇಯರ್ ಮೋದಾಮಣಿ, ಜಿಲ್ಲಾ ಕಾರ್ಯಕ್ರಮ ಸಂಯೋಜಕ ಪುನೀತ್, ಪ್ರಚಾರಕಿ ಆಶಾ ಹಾಗೂ ಚಾಮರಾಜ ಕ್ಷೇತ್ರದ ವಿವಿಧ ಬ್ಲಾಕ್ಗಳ ಮಹಿಳಾ ಮುಖಂಡರು ಇದ್ದರು.

ಬೇಸಿಗೆ ಶಿಬಿರದಿಂದ ವ್ಯಕ್ತಿತ್ವ ವಿಕಸನ

ಶಾರದಾ ಪಬ್ಲಿಕ್ ಶಾಲೆ ಕಾರ್ಯದರ್ಶಿ ಮಂಜುನಾಥ್ ಶ್ರೀವತ್ಸ



• **ಕನ್ನಡಪ್ರಭ ವಾರ್ತೆ** ಮೈಸೂರು

ಬೇಸಿಗೆ ಶಿಬಿರಗಳು, ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ. ಪಠ್ಯೇತರ ಚಟುವಟಿಕೆಗಳು ಅವರಿಗೆ ಒತ್ತಡ ಕಡಿಮೆ ಮಾಡಿಕೊಳ್ಳಲು ನೆರವಾಗುತ್ತವೆ ಎಂದು ಆರ್.ಟಿ. ನಗರದ ಶ್ರೀ ಶಾರದಾ ಪಬ್ಲಿಕ್ ಶಾಲೆ ಕಾರ್ಯದರ್ಶಿ ಮಂಜುನಾಥ್ ಶ್ರೀವತ್ಸ ಅಭಿಪ್ರಾಯಪಟ್ಟರು.

ಶಾಲೆಯಲ್ಲಿ ಆಯೋಜಿಸಲಾಗಿದ್ದ ಒಂದು ತಿಂಗಳ ಅವಧಿಯ ಬೇಸಿಗೆ ಶಿಬಿರದ ಸಮಾರೋಪದಲ್ಲಿ ಅವರು ಮಾತನಾಡಿದರು.

ಮಕ್ಕಳಿಗೆ ಬೇಸಿಗೆ ಶಿಬಿರಗಳು ತಮ್ಮಿಷ್ಟದ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಡುತ್ತವೆ. ಜೊತೆಗೆ ಹೊಸ ಸ್ನೇಹಿತರು, ಪರಿಸರದ ಪರಿಚಯ ಮಾಡಿಕೊಡುತ್ತವೆ ಎಂದು ಅವರು ತಿಳಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ವಿದ್ಯಾರ್ಥಿಗಳು ಹಾಗು ಪೋಷಕರು, ನಾನಾ ಸೃಜನಾತ್ಮಕ ಚಟುವಟಿಕೆಗಳ ಮೂಲಕ ಈ ಶಿಬಿರವನ್ನು ಆಸಕ್ತಿಕರವಾಗಿಸಿದ್ದಕ್ಕೆ ಸಂಘಟಕರಿಗೆ ಧನ್ಯವಾದ ಹೇಳಿದರು.

ಸಮಾರೋಪದಲ್ಲಿ ಶಿಬಿರದಲ್ಲಿ ಪಾಲ್ಗೊಂಡಿದ್ದ ಎಲ್ಲಾ ಮಕ್ಕಳಿಗೆ ನಾನಾ ಪ್ರಭೇಧಗಳ ಗಿಡ ವಿತರಿಸಿ, ಪರಿಸರ ಸಂರಕ್ಷಣೆ ಸಂದೇಶ ಸಾರಲಾಯಿತು.

ಚಿತ್ರಾವಳಿ



ಶ್ರೀ ಮಲೈ ಮಹದೇಶ್ವರ ಬೆಟ್ಟ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು ಅವರನ್ನು ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಎಂ. ಮಹೇಶ ಚಿಕ್ಕಲ್ಲೂರು ಅವರು ಅಭಿನಂದಿಸಿದರು. ಕವಿತಾ ರಘು, ಶಫರ್ಡ್ ಇಂಡಿಯಾ ಇಂಟರ್‌ನ್ಯಾಷನಲ್ ರಾಷ್ಟ್ರೀಯ ಮಹಿಳಾಧ್ಯಕ್ಷೆ ಕೆ.ಆರ್. ಪ್ರಭಾವತಿ, ಪ್ರಾಧಿಕಾರದ ಮಹದೇವಸ್ವಾಮಿ ಇದ್ದರು.



ಜನಪರ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಡಾ.ಎಂ. ಮಹೇಶ ಚಿಕ್ಕಲ್ಲೂರು ಅವರು ಶ್ರೀ ಮಲೈ ಮಹದೇಶ್ವರ ಬೆಟ್ಟದ ಶ್ರೀ ಸಾಲೂರು ಬೃಹನ್ಮಠದ ಪೀಠಾಧಿಪತಿ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು. ಕೆ.ಆರ್. ಪ್ರಭಾವತಿ, ದರ್ಶನ್, ಹರ್ಷ ಮೊದಲಾದವರು ಇದ್ದರು.

ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸುವ ಪ್ರಕ್ರಿಯೆಯೇ ನಿಜ ಶಿಕ್ಷಣ: ಡಾ.ಪ್ರತಿಮಾ

ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕಿ ಅಭಿಮತ ವಿದ್ಯಾವರ್ಧಕ ಕಾಲೇಜಿನ ಸಹಪಠ್ಯ ಚಟುವಟಿಕೆ ಸಮಾರೋಪ ಸಮಾರಂಭ



• **ಕನ್ನಡಪ್ರಭ ವಾರ್ತೆ** ಮೈಸೂರು

ವಿದ್ಯಾರ್ಥಿಯ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ರೂಪಿಸುವ ಪ್ರಕ್ರಿಯೆಯೇ ನಿಜವಾದ ಶಿಕ್ಷಣ ಎಂದು ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕಿ ಪ್ರೊ.ಡಿ.ಎಸ್. ಪ್ರತಿಮಾ ತಿಳಿಸಿದರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಸಹಪಠ್ಯ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ವ್ಯಕ್ತಿತ್ವ ವಿಕಾಸದಲ್ಲಿ ಸಹಪಠ್ಯ ಚಟುವಟಿಕೆಗಳಾದ ಕ್ರೀಡೆ, ಸಂಗೀತ, ನೃತ್ಯ, ಪ್ರಬಂಧ, ನಾಟಕ ಇಂತಹ ಹಲವು ಚಟುವಟಿಕೆಗಳಲ್ಲಿ ಭಾಗವಹಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸುಪ್ತವಾಗಿ ಅಡಗಿರುವ ಪ್ರತಿಭೆಯನ್ನು ಹೊರತರುವಲ್ಲಿ ಇದು ಸಹಕಾರಿ ಎಂದರು.

ಶಿಕ್ಷಣವೆಂದರೆ ಪಠ್ಯಪುಸ್ತಕಗಳಲ್ಲಿರುವ ವಿಷಯಗಳನ್ನು ಕಲಿಯುವುದಷ್ಟೇ ಅಲ್ಲ. ವಿದ್ಯಾರ್ಥಿಗಳಲ್ಲಿರುವ ಸೃಜನಶೀಲತೆ, ವ್ಯಕ್ತಿತ್ವವನ್ನು ಅಭಿವ್ಯಕ್ತಪಡಿಸಲು ಇರುವ ಉತ್ತಮ ವೇದಿಕೆಯೇ ಸಹ ಪಠ್ಯ ಚಟುವಟಿಕೆ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೇವಲ ಅಂಕಗಳಿಂದ ಜೀವನದಲ್ಲಿ ಯಶಸ್ಸು ಗಳಿಸಲು ಸಾಧ್ಯವಿಲ್ಲ. ಸಂವಹನ ಕೌಶಲ್ಯ, ಆತ್ಮವಿಶ್ವಾಸ ಮತ್ತು ಸೃಜನಶೀಲತೆ ಇವೆಲ್ಲವೂ ಅಗತ್ಯವಾಗಿದ್ದು, ಈ ಎಲ್ಲಾ ಗುಣಗಳನ್ನು ಬೆಳೆಸಲು ಉತ್ತಮ ವೇದಿಕೆಯೇ ಸಹ ಪಠ್ಯ ಚಟುವಟಿಕೆಯಾಗಿದೆ ಎಂದು ಅವರು ಹೇಳಿದರು.

ಕ್ರೀಡಾ ವಿಭಾಗದ ಯಾವುದೇ ಪಂದ್ಯದಲ್ಲಿ ಭಾಗವಹಿಸಿದಾಗ ಅಲ್ಲಿ ಸೋಲು- ಗೆಲುವು ಮುಖ್ಯವಾಗುವುದಿಲ್ಲ. ಬದಲಿಗೆ ಭಾಗವಹಿಸುವಿಕೆಯೇ ಪ್ರಮುಖ. ಯಾರೇ ಆದರೂ ಜೀವನದಲ್ಲಿ ಸ್ಪಷ್ಟವಾದ ಗುರಿಯನ್ನಿಟ್ಟುಕೊಂಡು ಆಸಕ್ತಿಯಿಂದ ಮುಂದುವರೆದಾಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ. ವಿದ್ಯಾರ್ಥಿಗಳು ತಮ್ಮಲ್ಲಿರುವ ಅಪಾರವಾದ ಶಕ್ತಿಯನ್ನು ಉಪಯೋಗಿಸಿಕೊಂಡು ತಮ್ಮ ಕನಸುಗಳನ್ನು ಈಡೇರಿಸಿಕೊಳ್ಳುವ ಮೂಲಕ ಯಶಸ್ವಿ ಬದುಕನ್ನು ರೂಪಿಸಿಕೊಳ್ಳಿ ಎಂದು ಅವರು ಸಲಹೆ ನೀಡಿದರು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್.ಮರೀಗೌಡ ಮಾತನಾಡಿ, ಕಾಲೇಜು ಕೇವಲ ಶಿಕ್ಷಣಕ್ಕೆ ಮಹತ್ವ ನೀಡದೇ ವಿದ್ಯಾರ್ಥಿಗಳ ಸಮಗ್ರ ಬೆಳವಣಿಗೆಗೆ ಅಗತ್ಯವಾದ ದೈಹಿಕ, ಮಾನಸಿಕ, ನೈತಿಕ ಮೌಲ್ಯಗಳಿಗೆ ಮಹತ್ವ ನೀಡುತ್ತಿದ್ದು, ವಿದ್ಯಾರ್ಥಿಗಳು ಏನನ್ನೇ ಕಲಿತರು ಅದನ್ನು ಬದುಕಿಗೆ ಅಳವಡಿಸಿಕೊಂಡು ಮುಂದುವರಿಯಬೇಕು. ವಿಶ್ವವಿದ್ಯಾನಿಲಯಗಳು ಕೇವಲ ಜ್ಞಾನ ಮತ್ತು ನಡತೆಯನ್ನು ಕಲಿಸದೆ ದೈನಂದಿನ ಬದುಕಿಗೆ ಅವಶ್ಯಕವಾದ ಜೀವನ ಕೌಶಲ್ಯಗಳನ್ನು ಕಲಿಸುವ ಮೂಲಕ ವಿದ್ಯಾರ್ಥಿಗಳ ಬದುಕು ಹಸನಾಗಿಸುವ ನಿಟ್ಟಿನಲ್ಲಿ ಹೆಜ್ಜೆಯಿಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ. ವಿಶ್ವನಾಥ್ ಮಾತನಾಡಿ, ಅಂತಿಮ ವರ್ಷದ ವಿದ್ಯಾರ್ಥಿಗಳು ಪದವಿ ವಿದ್ಯಾಭ್ಯಾಸ ಮುಗಿಸಿ ಸಮಾಜಕ್ಕೆ ಪ್ರವೇಶಿಸುತ್ತಿದ್ದೀರಿ, ಸಮಾಜದಲ್ಲಿ ನಿಮ್ಮ ಮುಂದೆ ಹಲವು ಸವಾಲುಗಳು ಎದುರಾಗಲಿದ್ದು ಅವುಗಳನ್ನು ನಿಮ್ಮ ಕೌಶಲ್ಯ ಹಾಗೂ ಧೈರ್ಯದಿಂದ ಎದುರಿಸಿ ಉತ್ತಮ ಜೀವನವನ್ನು ಕಟ್ಟಿಕೊಳ್ಳಿ ಎಂದರು.

ಇದೇ ವೇಳೆ 2025- 26ನೇ ಶೈಕ್ಷಣಿಕ ಸಾಲಿನಲ್ಲಿ ಪಠ್ಯೇತರ ಹಾಗೂ ಕ್ರೀಡೆಗಳಲ್ಲಿ ಉತ್ತಮ ಸಾಧನೆ ತೋರಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಾಲೇಜು ನಿರ್ವಹಣಾ ಮಂಡಳಿ ಅಧ್ಯಕ್ಷ ಟಿ. ನಾಗರಾಜು ಇದ್ದರು. ಡಿ.ಎಸ್. ಅರ್ಪಣ ಪ್ರಾರ್ಥಿಸಿದರು. ಅಧ್ಯಾಪಕ ಸಲಹೆಗಾರ ಲಾವಣ್ಯ ಸ್ವಾಗತಿಸಿದರು. ಚಂದನ್ ವಂದಿಸಿದರು. ಆರ್. ವಿದ್ಯಾ ನಿರೂಪಿಸಿದರು.

